
ಓಂ ಶ್ರೀ ಗುರು ಬಸವ ಲಿಂಗಾಯ ನಮಃ


866666

ಕಲ್ಯಾಣ ಕಿರಣ

ಏಪ್ರಿಲ್-2017

ಬೆಲೆ-20ರೂ











ಪೂಜ್ಯ ಮಾತಾಜಿಯವರ ವರ್ಧಂತಿಯ ಸಿಹಿ ಕ್ಷಣಗಳು

ಅಧ್ಯಾತ್ಮ ಕ್ರಾಂತಿವೀರ

ಕಾರ್ತಿಕದ ಕತ್ತಲಲಿ ಆಕಾಶ ದೀಪವಾಗಿ
ನೀ ಬಂದೆ,
ಬಟ್ಟೆಗೆಟ್ಟವರಿಗೊಂದು ದೊಂದಿ ದಿಕ್ಕಾಗಿ,
ಎಂಟು ಶತಮಾನಗಳ ಹಿಂದೆ,
ಅಗ್ನಿ ಖಡ್ಗವನಾಂತ ಓ ಅಧ್ಯಾತ್ಮ ಕ್ರಾಂತಿವೀರ,
ದೇವದಯೆಯೊಂದು ಹೇ ಧೀರಾವತಾರ,
ಶ್ರೀ ಬಸವೇಶ್ವರಾ!

ಜಾತಿ ಪದ್ಧತಿಯ ಹೋಮ ಕೂಪಕ್ಕೆ
ಬಿದ್ದು, ವೈದಿಕರ ಯಜ್ಞತಾಪಕ್ಕೆ ರು
ಬಲಿವೋದ ದಲಿತ ಜೀವರನೆತ್ತಿ ಮತಿವಿಚಾರಕ್ಕೆ
ಕಾಯಕದ ದಿವ್ಯ ತತ್ವದ ಸುಕ್ಷೇಮ ಧರ್ಮನಾಕಕ್ಕೆ
ನಡೆಸಿದ ಮಹಾತ್ಮನೆ ನಿನಗೆ ನಮೋ ನಮಃ।

ಇಂದಿಗೂ ನಾವು ನಿನ್ನೆತ್ತರಕೆ ಏಳಲಾರದೆ ಅಯ್ಯೋ
ಮತದ ಉಸುಬಿಗೆ ಸಿಲುಕಿ ತತ್ತರಿಸುತಿಹೆವಯ್ಯಾ !
ಬಾರಯ್ಯ, ಕೈಹಿಡಿದೆತ್ತಿ ಬದುಕಿಸು ನಮ್ಮನೆಳೆದು
ವರ್ಣಾಶ್ರಮದ ಹೆಸರ ಹೊಲೆಗೆಸರ ವಂಚನೆಯ ಕುಂಡದಿಂದೆ;
ಭಕ್ತಿ ಗಂಗೆಯನೆರೆದು
ಭಾಗವತ ಶಕ್ತಿಯಿಂ ಕರೆದು
ಮತ ಮೌಢ್ಯದಜ್ಞಾನ ಪಂಕವನು ತೊಳೆದು
ಶುಚಿಗೊಳಿಸು ವಿಜ್ಞಾನವೇದಾಂತ ತೀರ್ಥದಿಂದ।

– ರಾಷ್ಟ್ರಕವಿ ಕುವೆಂಪು

ಅಯ್ಯಾ, ನಿಮ್ಮ ಶರಣರ ಬರುವಿಂಗೆ ಗುಡಿತೋರಣವ ಕಟ್ಟುವೆ
ಅಯ್ಯಾ ನಿಮ್ಮ ಶರಣರ ಬರುವಿಂಗೆ ಮುಡುಹಿನಲ್ಲಿ ಪಟ್ಟವ ಕಟ್ಟುವೆ
ಅಯ್ಯಾ ನಿಮ್ಮ ಶರಣರೆನ್ನ ಮನೆಗೆ ಬಂದಡೆ
ಅವರ ಶ್ರೀಪಾದವೆನ್ನೆ ಹೃದಯದಲ್ಲಿ ಬಗೆದಿಟ್ಟುಕೊಂಬೆ ಕಾಣಾ
ಚೆನ್ನಮಲ್ಲಿಕಾರ್ಜುನ.

ಸಂಪುಟ-49 ಬಸವ ಶಕೆ -883 ಪಂಚ ವಾರ್ಷಿಕ ಸದಸ್ಯತ್ವ 1000 ರೂ.
ಸಂಚಿಕೆ-04 ಏಪ್ರಿಲ್-2017 ವಾರ್ಷಿಕ ಚಂದಾ 200 ರೂ.

ಕಿರಣ ಗನ್ನಡಿ

884ನೆಯ ಬಸವ ಜಯಂತಿಯ ಶುಭಾಶಯಗಳು

ಶನಿ (ಶರಣ)ವಾರ ದಿ.29-4-2017ರಂದು 882ನೆಯ ಬಸವ ಜಯಂತಿ ಒದಗಿ ಬಂದಿದ್ದು ಅಂದು 884ನೆಯ ಬಸವ ಶಕೆ ಪ್ರಾರಂಭವಾಗುವುದು. ಕಲ್ಯಾಣ ಕಿರಣದ ಓದುಗರಿಗೆ ಬಸವ ಜಯಂತಿಯ ಶುಭಾಶಯಗಳು. - ಪೂಜ್ಯ ಮಾತಾಜಿ

ಏಪ್ರಿಲ್ ಮೇ ನಲ್ಲಿ ಬರುವ ಹಬ್ಬ ಹುಣ್ಣಿಮೆ

1. ಅಕ್ಕಮಹಾದೇವಿ ಜಯಂತಿ – ಏಪ್ರಿಲ್ 11
2. ಹರಳಯ್ಯ ಜಯಂತಿ – ಏಪ್ರಿಲ್ 11
3. ಬಸವ ಜಯಂತಿ – ಏಪ್ರಿಲ್ 29
4. ಧಾರವಾಡದಲ್ಲಿ ಶರಣೋತ್ಸವ – ಮೇ-13,14,15

Kalyana Kirana -Reg No.19988/70. Monthly Magazine Edited and Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, Basava Mantapa Road, 2nd Block, Rajajinagar, Bengaluru-560010. Phone : 080-23131476, Send SMS to 9945806297

ವಿಶ್ವಗುರು ಬಸವಣ್ಣನವರ 884ನೆಯ ಜಯಂತಿ ಉತ್ಸವ

ಶನಿ (ಶರಣ)ವಾರ, ದಿ.29-04-2017 ರಂದು

ವೇಳೆ : ಬೆಳಿಗ್ಗೆ 10-30

ಸ್ಥಳ : ಬಸವ ಮಂಟಪ, ರಾಜಾಜಿನಗರ

ದಿವ್ಯ ಸನ್ನಿಧಿ : ಪೂಜ್ಯ ಶ್ರೀ ಜಗದ್ಗುರು ಡಾ॥ ಮಾತೆ ಮಹಾದೇವಿ
ಬಸವ ಧರ್ಮ ಪೀಠ, ಕೂಡಲ ಸಂಗಮ



ವಿಶ್ವ ಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ (ರಿ)
ಬಸವ ಮಂಟಪ
2035, 20ನೆಯ ಬಸವ ಮಂಟಪ ಮುಖ್ಯ ರಸ್ತೆ, ಎರಡನೆಯ ವಿಭಾಗ
ರಾಜಾಜಿ ನಗರ, ಬೆಂಗಳೂರು-560010
ದೂರವಾಣಿ : 080- 23131476, 9448113920

ಓಂ ಶ್ರೀ ಗುರು ಬಸವ ಲಿಂಗಾಯ ನಮಃ

866666

ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠ(ರಿ.)

ಉಳವಿ ರಸ್ತೆ ಧಾರವಾಡ ಸಂಸ್ಥೆಯಿಂದ

ಶರಣೋತ್ಸವ ಕಾರ್ಯಕ್ರಮ

2017, ಮೇ-13, 14, ಮತ್ತು 15ರಂದು

ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ, ಧಾರವಾಡ ಒಂದು ವಿಶ್ವಸ್ಥ ಸಂಸ್ಥೆ ಇದ್ದು 1968ರಲ್ಲಿಯೇ ಸ್ಥಾಪನೆಗೊಂಡಿದೆ. ಪರಮ ಪೂಜ್ಯ ಲಿಂಗೈಕ್ಯ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು 1967ರಲ್ಲಿಯೇ ಜಮೀನನ್ನು ಖರೀದಿಸಿ ಅಕ್ಕಮಹಾದೇವಿ ಆಶ್ರಮ ನಿರ್ಮಾಣ ಆರಂಭಿಸಿದರು. ವಿಶ್ವಗುರು ಬಸವಣ್ಣನವರು ಪುರುಷರಷ್ಟೇ ಸ್ತ್ರೀಯರಿಗೂ ಧಾರ್ಮಿಕ, ಸಾಮಾಜಿಕ ಹಕ್ಕುಗಳು ಲಭ್ಯವಾಗಬೇಕೆಂಬ ಕಳಕಳಿಯಿಂದ ಮಹಿಳೆಯರಿಗೂ ಧಾರ್ಮಿಕ ಸಂಸ್ಕಾರ ಕೊಟ್ಟುದಲ್ಲದೆ, ಸಾಮಾಜಿಕ ಸಮಾನತೆಯನ್ನು ಒದಗಿಸಿದರು. ಮಹಿಳಾ ಕುಲದ ಪ್ರತಿನಿಧಿಯಾಗಿ ವೀರ ವಿರಾಗಿಣಿ ಜಗನ್ಮಾತಾ ಅಕ್ಕಮಹಾದೇವಿ ಅನುಭವ ಮಂಟಪದಲ್ಲಿ ಆಚಾರ್ಯ ಪದವಿಯಿಂದ ಗೌರವಿಸಲ್ಪಟ್ಟರು.

ವೀರ ವಿರಾಗಿಣಿ ಜಗನ್ಮಾತಾ ಅಕ್ಕಮಹಾದೇವಿಯ ಹೆಸರಿನಲ್ಲಿ ಅನುಭಾವ ಪೀಠವೊಂದನ್ನು ಸ್ಥಾಪಿಸಿ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಅದಕ್ಕೆ ಪೂಜ್ಯ ಶ್ರೀ ಮಾತೆ ಮಹಾದೇವಿಯವರನ್ನು ಪ್ರಥಮ ಪೀಠಾಧೀಶರನ್ನಾಗಿ ದಿ. 21-4-1970ರಂದು ಪೀಠಾರೋಹಣ ಮಾಡಿಸಿದರು. ಈ ಐತಿಹಾಸಿಕ ಪೀಠಾರೋಹಣವು ನಡೆದುದು ಜಗನ್ಮಾತಾ ಅಕ್ಕಮಹಾದೇವಿ ಜಯಂತಿಯಂದು.

ಟ್ರಸ್ಟ್ ವತಿಯಿಂದ ಪ್ರಾರ್ಥನಾ ಮಂದಿರ-ಬಸವ ಮಂಟಪವನ್ನು ಮತ್ತು ದಾಸೋಹ ಶಾಲೆಯನ್ನು ಕಟ್ಟಿಸಲಾಗಿದೆ. ಪ್ರತಿ ದೇವ (ಭಾನು)ವಾರ ಶರಣ ಸಂಗಮ -ಸಾಮೂಹಿಕ ಪ್ರಾರ್ಥನೆಯು ಬೆಳಿಗ್ಗೆ 11ರಿಂದ 1-30ರವರೆಗೆ ನಡೆಯುತ್ತದೆ. ಪ್ರಾರ್ಥನೆ -ಪ್ರವಚನದ ನಂತರ ಪ್ರಸಾದ ದಾಸೋಹ ವಿರುತ್ತದೆ. ಶರಣರ ಜಯಂತಿ, ಲಿಂಗೈಕ್ಯ ಸಂಸ್ಮರಣೆಯನ್ನು ವಿಶೇಷ ದಿನಗಳಂದು ಆಚರಿಸಲಾಗುವುದು. ಶಿವರಾತ್ರಿಯಂದು ಗಣಮೇಳವನ್ನು ಪಥ ಸಂಚಲನವನ್ನು, ಬಸವ ಜಯಂತಿಯಂದು ಗುರು ಬಸವಣ್ಣನವರ ಭಾವಚಿತ್ರದ ಮೆರವಣಿಗೆಯನ್ನು ಶರಣ-ಶರಣೆಯರ ಪಥ ಸಂಚಲನವನ್ನು ಏರ್ಪಡಿಸಲಾಗುವುದು. ಎಡದ ಕೈಯಲ್ಲಿ ಲಿಂಗಪೂಜೆ ಬಲದ ಕೈಯಲ್ಲಿ ಜಂಗಮಸೇವೆ ಎಂಬ ಧರ್ಮಪಿತ ಬಸವಣ್ಣನವರ ವಾಣಿಯನ್ನು ಅನುಸರಿಸಲೋಸುಗ ಅನಾಥಾಶ್ರಮವನ್ನು ನಡೆಸಲಾಗುತ್ತಿದೆ.

40 ವರ್ಷ ಕಾಲ ಅಖಂಡವಾಗಿ ಸಂಚರಿಸಿ, ಧರ್ಮ ಪ್ರಚಾರ ಮಾಡಿದ ಜಂಗಮ ಮೂರ್ತಿ ಪೂಜ್ಯ ಲಿಂಗಾನಂದ ಸ್ವಾಮಿಗಳು ದಿ. 30-6-1995ರಂದು ಲಿಂಗೈಕ್ಯರಾಗಿ ಕ್ರಿಯಾ ವಿಶ್ರಾಂತಿಯನ್ನು ಹೊಂದಿದರು. ಕೂಡಲ ಸಂಗಮದಲ್ಲಿ ದಿ. 13-1-1992ರಂದು ಬಸವ ಧರ್ಮದ ಪರಮೋಚ್ಚ ಪೀಠವನ್ನು ಏರಿದ ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳು ಲಿಂಗೈಕ್ಯರಾದ ಬಳಿಕ ಪೂಜ್ಯ ಗುರುಗಳ ಸದಿಚ್ಛೆಯಂತೆ ಧಾರವಾಡದ ಅಕ್ಕಮಹಾದೇವಿ ಅನುಭಾವ ಪೀಠದ ಅಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಬಸವ ಧರ್ಮದ ಮಹಾಜಗದ್ಗುರು ಪೀಠವನ್ನು ದಿ. 13-1-1996ರಂದು

ಆರೋಹಣ ಮಾಡಿದರು. ಮತ್ತು ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠಕ್ಕೆ ದ್ವಿತೀಯ ಪೀಠಾಧೀಶರನ್ನಾಗಿ ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರನ್ನು 1996ರ ಅಕ್ಕನ ಹುಣ್ಣಿಮೆ ಯಂದು ಪೀಠಾರೋಹಣ ಮಾಡಿಸಿದರು. ಉಭಯ ಜಗದ್ಗುರುಗಳೂ ಕರ್ನಾಟಕ ಮಾತ್ರವಲ್ಲ ಇತರ ರಾಜ್ಯಗಳಾದ ದೆಹಲಿ, ಮಹಾರಾಷ್ಟ್ರ, ಆಂಧ್ರ, ತಮಿಳು ನಾಡುಗಳಲ್ಲಿ ಸಂಚರಿಸಿ ಪ್ರವಚನ, ಸಮ್ಮೇಳನಗಳನ್ನು ಮಾಡಿರುವುದೇ ಅಲ್ಲದೆ ಸಂಸ್ಥೆಯ ಶಾಖೆಗಳನ್ನು ಬಸವ ಮಂಟಪಗಳನ್ನು ತೆರೆದಿದ್ದಾರೆ. ಕೂಡಲ ಸಂಗಮದಲ್ಲಿ ಪ್ರತಿವರ್ಷವೂ ಜನವರಿ 11 ರಿಂದ 15ರವರೆಗೆ ಶರಣ ಮೇಳ, ಬಸವ ಕಲ್ಯಾಣದಲ್ಲಿ ಆಶ್ವಯುಜ ಶುದ್ಧ ತ್ರಯೋದಶಿ, ಚತುರ್ದಶಿ ಮತ್ತು ಹುಣ್ಣಿಮೆಯಂದು ಕಲ್ಯಾಣ ಪರ್ವ, ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ಹಾತ್‌ಕಣಂಗಲೆ ತಾಲ್ಲೋಕಿನ ಅಲ್ಲಮಗಿರಿಯಲ್ಲಿ ಲಿಂಗಾಯತ ಗಣಮೇಳವನ್ನು ಯುಗಾದಿಯಿಂದ 3 ದಿವಸಗಳ ಕಾಲ ನಡೆಸಿಕೊಂಡು ಬರುತ್ತಿರುವ ಹೆಗ್ಗಳಿಕೆ ಪೂಜ್ಯ ಮಾತಾದ್ವಯರದು.

1970ನೆಯ ಇಸವಿಯ ಚೈತ್ರ ಪೌರ್ಣಿಮೆಯಂದು ಪ್ರಥಮ ಪೀಠಾರೋಹಣವಾಗಿ ನಂತರ ಆಗಾಗ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದೆಯಾದರೂ 2010ರಿಂದ ಇನ್ನು ಮುಂದೆ ಪ್ರತಿವರ್ಷವೂ ಅಕ್ಕಮಹಾದೇವಿ ಶರಣೋತ್ಸವವನ್ನು 3 ದಿವಸಗಳ ಕಾಲ ಹಮ್ಮಿಕೊಳ್ಳಬೇಕೆಂಬ ಸಂಕಲ್ಪ ತಾಳಲಾಗಿದೆ. ಇದಕ್ಕೆ ಶರಣ ಬಂಧುಗಳ ಒತ್ತಾಸೆಯೂ ಇದೆ. ಶನಿ(ಶರಣ)ವಾರ ದಿ.13ರಂದು ಬೆಳಿಗ್ಗೆ 10-30ರಿಂದ ಜಗನ್ಮಾತಾ ಅಕ್ಕಮಹಾದೇವಿ ಮಠದಲ್ಲಿ ಕಾರ್ಯಕ್ರಮದ ಉದ್ಘಾಟನೆ, ಸಂಜೆ 4-30ರಿಂದ ಧರ್ಮಚಿಂತನಗೋಷ್ಠಿ. ದಿ. 14 ಭಾನು(ದೇವ)ವಾರದಂದು ಬೆಳಿಗ್ಗೆ 10-30ರಿಂದ ಲಿಂಗಾಯತ ಧರ್ಮ ಜಾಗೃತಿ ಸಮ್ಮೇಳನ, ಸಾಮೂಹಿಕ ಪ್ರಾರ್ಥನೆ ಮತ್ತು ಸಂಜೆ 5-00ರಿಂದ ಸಾಂಸ್ಕೃತಿಕ ಕಾರ್ಯಕ್ರಮ. ಸೋಮ(ಶಿವ) ವಾರ ದಿ.15ರಂದು ಬೆಳಿಗ್ಗೆ ವಿಶೇಷ ಪೂಜೆ. 10-30ರಿಂದ ಪೀಠಾರೋಹಣದ 47ನೆಯ ವಾರ್ಷಿಕೋತ್ಸವ, ನಂತರ ಮೆರವಣಿಗೆ, ಸಮಾರೋಪ ಸಮಾರಂಭ.

3 ದಿವಸಗಳ ಈ ಕಾರ್ಯಕ್ರಮಕ್ಕೆ ಆಗಮಿಸುವ ಶರಣ ಬಂಧುಗಳಿಗೆ ಪ್ರಸಾದ (ಊಟ) ಮತ್ತು ವಸತಿಯ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಆದಕ್ಕಾಗಿ ಸಾರ್ವಜನಿಕರಿಂದ ಆರ್ಥಿಕ ನೆರವು ಕೋರುತ್ತೇವೆ. ದೇಣಿಗೆ ಕೊಡುವವರಿಗೆ ಕೆಳಗಿನಂತೆ ಅವಕಾಶವಿದೆ.

ಒಂದು ಹೊತ್ತಿನ ಉಪಾಹಾರ, ಊಟದ ಖರ್ಚನ್ನು ಒಬ್ಬೊಬ್ಬರೇ ವಹಿಸಿಕೊಳ್ಳಬಹುದು.

ಮಹಾಪೋಷಕರು	10000ರೂ	ಹಿತೈಷಿಗಳು	1000ರೂ
ಪೋಷಕರು	5000ರೂ	ವಿಶೇಷ ಸದಸ್ಯರು	500ರೂ
ದಾನಿಗಳು	3000ರೂ	ಸಾಮಾನ್ಯ ಸದಸ್ಯರು	250ರೂ

ದವಸ -ಧಾನ್ಯ, ಬೆಲ್ಲ - ಸಕ್ಕರೆ ಇತ್ಯಾದಿ ಪದಾರ್ಥಗಳನ್ನು ದೇಣಿಗೆಯಾಗಿ ನೀಡಬಹುದು. ಉದಾರವಾಗಿ ದೇಣಿಗೆ ನೀಡುವುದಲ್ಲದೆ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕೆಂದು ಆಶಿಸುವೆವು.

ಶುಭಹಾರೈಕೆಗಳೊಡನೆ

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ

ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠ

ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ, ಉಳವಿ ರಸ್ತೆ, ರೇಲ್ವೆ ಗೇಟ್ ಬಳಿ

ಧಾರವಾಡ-580003, ದೂ: 0836-3204121

ಅಕ್ಕನ ಅಮರವಾಣಿ

ಭಾಗ– 39 – ಮಾತಾಜಿ

386. ಪ್ರಾಣಲಿಂಗ ಪೂಜೆ

ಮರಹು ಬಂದಿಹುದೆಂದು ಗುರು ಕುರುಹನೆ ಕೊಟ್ಟ;
ಅರಿವಿಂಗೆ ಪ್ರಾಣಲಿಂಗ ಬೇರೆ ಕಾಣಿರಣ್ಣಾ.
ನಿರ್ಣಯವಿಲ್ಲದ ಭಕ್ತಿಗೆ ಬರಿದೆ ಬಳಲಲದೇತಕೆ?
ಚೆನ್ನಮಲ್ಲಿಕಾರ್ಜುನದೇವರ ದೇವಯ್ಯನನರಿದು ಪೂಜಿಸಿದಡೆ
ಮರಳಿ ಭವಕ್ಕೆ ಬಹನೆ?

ಭಾವಾರ್ಥ– ಮರಹು ಬಂದಿಹುದೆಂದು ಗುರು ಕುರುಹನೆ ಕೊಟ್ಟ ಇಷ್ಟಲಿಂಗಧಾರಣೆ, ಪೂಜೆ ಲಿಂಗಾಯತ ಧರ್ಮದ ಮಹತ್ವಪೂರ್ಣ ಆಚರಣೆ. ಭವ ಬಂಧನದಲ್ಲಿ ಬಿದ್ದು ಮರೆವಿನಲ್ಲಿ ಮುಳುಗಿರುವ ಜೀವಾತ್ಮನನ್ನು ಪಾರು ಮಾಡಲು ಗುರುವು ಇಷ್ಟಲಿಂಗ ಎಂಬ ಕುರುಹನ್ನು ಕೊಡುವನು. ಈ ಅರ್ಚನೆಯ ಉದ್ದೇಶ ಅರಿವಿನಿಂದ ಪ್ರಾಣಲಿಂಗೋಪಾಸನೆಯನ್ನು ಮಾಡುವುದು. ಸರಿಯಾದ ಜ್ಞಾನವಿಲ್ಲದೆ ಮಾಡುವ ಪೂಜೆ ಬರೀ ಬಳಲಿಕೆಯೇ ಹೊರತು ಬೇರಲ್ಲ. ಪರಮಾತ್ಮನ ನಿಜ ಸ್ವರೂಪವನ್ನು ಅರಿತು ಪೂಜಿಸಿದರೆ ಪುನಃ ಈ ಜೀವವು ಭವ ಬಂಧನದಲ್ಲಿ ಸಿಕ್ಕಿಕೊಳ್ಳದು.

387. ದೈವೀ ಶರಣಾಗತಿ

ಕಟ್ಟಿದ ಕೆರೆಗೆ ಕೋಡಿ ಮಾಣದು.
ಹುಟ್ಟಿದ ಪ್ರಾಣಿಗೆ ಪ್ರಳಯ ತಪ್ಪದಿನ್ನೆಂತಯ್ಯಾ?
ಅರುಹಿರಿಯರೆಲ್ಲ ವೃಥಾ ಕೆಟ್ಟು ಹೋದರಿನ್ನೆಂತಯ್ಯಾ?
ಚೆನ್ನ ಮಲ್ಲಿಕಾರ್ಜುನದೇವರ ದೇವರಿಗೋತು
ಮುಟ್ಟಿದವರೆಲ್ಲಾ ನಿಶ್ಚಿಂತರಾದರು.

ಭಾವಾರ್ಥ– ಕೆರೆಯು ತುಂಬಿದ ಬಳಿಕ ಅದು ಕೋಡಿ ಬಿದ್ದು ನೀರು ಹೊರಗೆ ಹರಿಯುತ್ತದೆ. ಹಾಗೆ ಪ್ರತಿಯೊಬ್ಬ ಹುಟ್ಟಿದ ಪ್ರಾಣಿಯು ಆಯುಷ್ಯ ತೀರಿದ ಬಳಿಕ ಸಾವಿಗೆ ಒಳಗಾಗಲೇ ಬೇಕು. ಈ ಪರಮ ಸತ್ಯವನ್ನು ಅರಿಯದೆ ಅನೇಕರು ಬದುಕನ್ನು ವ್ಯರ್ಥ ಮಾಡಿಕೊಂಡರು. ಆದರೆ ನಿಜವಾದ ದೇವನ ನಿಜ ಸ್ವರೂಪವನ್ನು ಅರಿತು ಶರಣಾಗತರಾದವರು ಭವಬಾಧೆ ಕಳೆದುಕೊಂಡು ನಿಶ್ಚಿಂತರಾದರು.

388. ಬೆಡಗಿನ ವಚನ

ಪ್ರಾಣ ಹೊಲ ಮೇರೆಯಲ್ಲಿ ಪ್ರಾಣ ಸತ್ತುದ ಕಂಡೆ!
ದೇವದಾನವ ಮಾನವರೆಲ್ಲ ಜೋಳವಾಳಿಯಲೈದಾರೆ.
ಜಾಣ ಕಲುಕುಟಿಗನನಗಲದೆ ಹೂವನೆ ಕೊಯ್ದು,

ಕಲಿಯುಗದ ಕರಸ್ಥಲ ದೇವಪೂಜೆ ಘನ.
ಮೇರುವಿನ ಕುದುರೆ ನಲಿದಾಡಲದುಭೂತ.
ಜಾರಜಂಗುಳಿಗಳ ಜಗಳ ಮೇಳಾಪ
ಮರುಪತ್ತದ ಮಾತು, ನಗೆಹಗರಣ!
ಕ್ಷೀರಸಾಗರದಲ್ಲಿ ದಾರಿಯಳವಡದಯ್ಯಾ
ನೀ ಹೇಳಬೇಕು, ಭಕ್ತರೆಂತಿಪ್ಪರೊ?
ಪಂಚವರ್ಣದ ಬಣ್ಣ ಸಂತೆಯ ವರದಾಟವು
ಚೆನ್ನಮಲ್ಲಿಕಾರ್ಜುನದೇವರ ದೇವಾ.
ತ್ರಿಭುವನದ ಹೆಂಡಿರ ನೀರಹೊಳೆಯಲ್ಲಿರಿಸಿತ್ತು.

ಭಾವಾರ್ಥ– ಇದು ಬೆಡಗಿನ ವಚನ. ಏನೂ ಅರ್ಥವಾಗುತ್ತಿಲ್ಲ.

389. ದೇವರು ಬಯಲ ಸ್ವರೂಪ

ಓದಿ ಓದಿ ವೇದ ವಾದಕ್ಕಿಕ್ಕಿತ್ತು.
ಕೇಳಿ ಕೇಳಿ ಶಾಸ್ತ್ರ ಸಂದೇಹಕ್ಕಿಕ್ಕಿತ್ತು.
ಅರಿದೆಹೆ ಅರಿದೆಹೆನೆಂದು ಆಗಮ ಅರೆಯಾಗಿ ಹೋಯಿತ್ತು.
ಪೂರೈಸಿಹೆ ಪೂರೈಸಿಹೆನೆಂದು
ಪುರಾಣ ಪೂರ್ವದ ಬಟ್ಟೆಗೆ ಹೋಯಿತ್ತು.
ನಾನೆತ್ತ ತಾನೆತ್ತ?
ಬೊಮ್ಮ ಬಟ್ಟಬಯಲು ಚೆನ್ನಮಲ್ಲಿಕಾರ್ಜುನದೇವರ ದೇವಾ.

ಭಾವಾರ್ಥ– ವೇದ ಮುಂತಾದ ಗ್ರಂಥಗಳನ್ನು ಓದಿ ಪಂಡಿತರು ಬರೀ ವಾದದಲ್ಲಿ ಕಾಲ ಕಳೆಯುತ್ತಾರೆ. ಶಾಸ್ತ್ರಗಳು ಹಲವಾರು ಮೂಢನಂಬಿಕೆಗಳನ್ನು ಬಿತ್ತುತ್ತವೆ. ಅವುಗಳನ್ನು ಕೇಳಿ ಜನರು ಸಂದೇಹವನ್ನು ಬಿತ್ತುತ್ತವೆ. ಅವುಗಳನ್ನು ಕೇಳಿ ಜನರು ಸಂದೇಹವನ್ನು ಭ್ರಾಂತಿಯನ್ನು ಬೆಳೆಸಿಕೊಳ್ಳುತ್ತಾರೆ. ನಾನು ಬಹಳ ತಿಳಿದಿದ್ದೇನೆ ಎಂದು ನಂಬಿದ ಆಗಮಗಳು ದೇವರ ಪೂರ್ಣಜ್ಞಾನವಿಲ್ಲದೆ ಅರೆಬರೆ ಜ್ಞಾನವನ್ನು ಬೋಧಿಸುತ್ತವೆ. ಪುರಾಣಗಳು ದೇವತೆಗಳ ವರ್ಣನೆಯನ್ನು ಮಾಡುತ್ತ ಬಹುದೇವತೋಪಾಸನೆಗೆ ಕಾರಣವಾಗಿ ದೇವರ ನಿಜಸ್ವರೂಪವನ್ನೇ ಮರೆಸುತ್ತೇವೆ. ಆದರೆ ದೇವರು ಇವೆಲ್ಲವನ್ನೂ ಮೀರಿದ ಬಟ್ಟ ಬಯಲು, ಶೂನ್ಯ ಸ್ವರೂಪ.

380. ಯಾಂತ್ರಿಕ ಭಕ್ತಿ

ಕುರುಹಿನ ರೂಹು ಅರಗಿಳಿಯನೋದಿಸುವಂತೆ,
ಓದಿಸುವುದಕ್ಕೆ ಜೀವವಿಲ್ಲ; ಕೇಳುವುದಕ್ಕೆ ಜ್ಞಾನವಿಲ್ಲ.
ಚೆನ್ನ ಮಲ್ಲಿಕಾರ್ಜುನದೇವದೇವರ ದೇವಯ್ಯಾ,

ಕುರುಹಿನ ರೂಹು ಆ ಅರಗಿಳಿಯನೋದಿಸುವಂತೆ.

ಭಾವಾರ್ಥ- ಎಮ್ಮೆ, ಹಸು ಮುಂತಾದವು ಕರು ಹಾಕುತ್ತವೆ. ತಮ್ಮ ಕರುಗಳನ್ನು ನೆಕ್ಕುತ್ತ ಆದರಿಸುತ್ತವೆ. ಅಕಸ್ಮಾತ್ ಕರುಗಳು ಸತ್ತು ಹೋದರೆ ತಾಯಿ ಹಸು, ಎಮ್ಮೆ ತುಂಬಾ ಗೋಳಾಡುವುದಲ್ಲದೆ ಹಾಲನ್ನು ಕೊಡುವುದಿಲ್ಲ. ತೊರೆ ಬಿಡುವುದಿಲ್ಲ. ಅದಕ್ಕೆ ಮನೆ ಮಾಲಿಕರು ಸತ್ತ ಕರುವನ್ನು ಒಯ್ದು ಅದರ ಹಸಿ ಭಾಗ ತೆಗೆದು ಒಳಗೆ ಹೊಟ್ಟನ್ನು ತುಂಬಿ ಕರುವಿನ ಪ್ರತಿಕೃತಿ ತಯಾರಿಸುವರು. ಅದನ್ನು ಹಸು, ಎಮ್ಮೆಯ ಮುಂದು ನಿಲ್ಲಿಸುವರು. ಅದನ್ನು ನೆಕ್ಕುತ್ತ ಹಸು, ಎಮ್ಮೆ ತೊರೆಬಿಡುತ್ತವೆ, ಹಾಲನ್ನು ಹಿಂಡಿಕೊಳ್ಳುತ್ತಾರೆ. ಕರುವಿನ ಗೊಂಬೆ ಪಂಜರದಲ್ಲಿರುವ ಗಿಳಿಗೆ ಬೋಧೆ ಮಾಡುತ್ತದೆ. ಓದಿಸುವ ಕರುವಿನ ಗೊಂಬೆಯಲ್ಲಿ ಜೀವವಿಲ್ಲ. ಅದರ ಮೌನಬೋಧೆಯನ್ನು ಅರ್ಥಮಾಡಿಕೊಳ್ಳಲು ಗಿಳಿಗೆ ಜ್ಞಾನವಿಲ್ಲ. ಹಾಗೆ ಕೆಲವು ಗುರುಗಳು ಯಾಂತ್ರಿಕವಾಗಿ ಭೋಧೆ ಮಾಡುವರು. ಅದು ಯಾರಿಗೂ ಅರ್ಥವಾಗುವುದಿಲ್ಲ. ಅರಗಿಳಿಯಂತೆ ಬೋಧೆಯನ್ನು ಕೇಳುವವರಿಗೆ ಯಾವುದೂ ಒಳಗೆ ಇಳಿಯುವುದಿಲ್ಲ. ಇಂತಹ ಗುರುಶಿಷ್ಯರ ಸಂಬಂಧ ಕರುವಿನ ಪ್ರತಿಕೃತಿ ಮತ್ತು ಪಂಜರದಲ್ಲಿರುವ ಗಿಳಿಗೆ ಬೋಧೆ ಮಾಡುತ್ತದೆ. ಅದು ಯಾರಿಗೂ ಅರ್ಥವಾಗುವುದಿಲ್ಲ. ಅರಗಿಳಿಯಂತೆ ಬೋಧೆಯನ್ನು ಕೇಳುವವರಿಗೆ ಯಾವುದೂ ಒಳಗೆ ಇಳಿಯುವುದಿಲ್ಲ. ಇಂತಹ ಗುರುಶಿಷ್ಯರ ಸಂಬಂಧ ಕರುವಿನ ಪ್ರತಿಕೃತಿ ಮತ್ತು ಪಂಜರದ ಗಿಳಿಯ ಸಂಬಂಧದಂತೆ.

391. ಅಜ್ಞಾನದ ಭಕ್ತಿ

ಕಿರಿಯರಹುದರಿದಲ್ಲದೆ,
ಹಿರಿಯರಹುದರಿದಲ್ಲ ನೋಡಾ!
ಭವಿಯಹುದರಿದಲ್ಲದೆ
ಭಕ್ತನಹುದರಿದಲ್ಲ ನೋಡಾ.
ಕುರುಹಹುದರಿದಲ್ಲದೆ, ನಿರಾಳವಹುದರಿದಲ್ಲ
ಚೆನ್ನ ಮಲ್ಲಿಕಾರ್ಜುನದೇವರ ದೇವಯ್ಯಾ.

ಭಾವಾರ್ಥ- ಬಹುಪಾಲು ಜನರು ಸಣ್ಣತನದಿಂದ ವರ್ತಿಸುವರು ಪ್ರೌಢರಾಗಿ ವರ್ತಿಸಲು ಅರಿತಿರುವುದಿಲ್ಲ. ಭವಿಗಳಾಗಿ ವರ್ತಿಸುವರೇ ವಿನಾ ನಿಜವಾದ ಭಕ್ತರಾಗಿ ವರ್ತಿಸುವುದಿಲ್ಲ. ಬಹುಪಾಲು ಭಕ್ತರು ಇಷ್ಟಲಿಂಗ ಎಂಬ ಕುರುಹನ್ನು ಪೂಜಿಸುವರು. ಆದರೆ ಅದರ ಹಿಂದಿರುವ ಇಷ್ಟಲಿಂಗ ನಿರಾಳ ಸ್ವರೂಪದ ಪರಮಾತ್ಮನನ್ನು ಅರಿಯಲು ಅಸಮರ್ಥರಾಗಿರುವರು.

382. ಸಮಯಪ್ರಜ್ಞೆ

ಕುಲಗಿರಿಯ ಶಿಖರದ ಮೇಲೆ ಬಾಳೆ ಬೆಳೆವುದಯ್ಯಾ ಎಂದಡೆ
ಬಾಳೆ ಬೆಳೆವುದಯ್ಯಾ ಎನಬೇಕು

ಓರೆಗಲ್ಲ ನುಗ್ಗುಗುಟ್ಟಿ ಮೆಲಬಹುದಯ್ಯಾ ಎಂದಡೆ
ಅದು ಅತ್ಯಂತ ಮೃದು ಮೆಲಬಹುದಯ್ಯಾ ಎನಬೇಕು
ಸಿಕ್ಕಿದ ಠಾವಿನಲ್ಲಿ ಉಚಿತವ ನುಡಿವುದೆ ಕಾರಣ
ಚೆನ್ನಮಲ್ಲಿಕಾರ್ಜುನದೇವರ ದೇವಯ್ಯಾ
ಮರ್ತ್ಯಕ್ಕೆ ಬಂದುದಕ್ಕಿದೆ ಗೆಲವು.

ಭಾವಾರ್ಥ- ಕುಲಗಿರಿಯ ಶಿಖರದ ಮೇಲೆ ಬಾಳೆ ಬೆಳೆವುದಯ್ಯಾ ಎಂದಡೆ ಕೆಲವರು ವಿತಂಡವಾದಿಗಳಾಗಿ ಇರುತ್ತಾರೆ. ಹಠದಿಂದ ತಮ್ಮ ಮಾತನ್ನು ಸಮರ್ಥಿಸಿಕೊಳ್ಳುತ್ತಾರೆ. ಬೆಟ್ಟದ ಕಲ್ಲಿನ ಮೇಲೆ ಬಾಳೆಗಿಡ ಬೆಳೆಯುತ್ತೆ ಎಂದು ವಾದಿಸುವರು. ಅದು ಸಾಧ್ಯವಿಲ್ಲ ಎಂದು ವಾದಿಸಲು ಹೋಗಬಾರದು. ಬಂಡೆಯ ಕಲ್ಲನ್ನು ಚೆನ್ನಾಗಿ ಪುಡಿ ಮಾಡಿ ತಿನ್ನಬಹುದು ಎಂದರೆ ಹೌದು ಎಂದು ಹೇಳಿ ಸುಮ್ಮನಿರಬೇಕು. ಇಂತಹ ಮೂರ್ಖರ ಸಮೂಹದಲ್ಲಿ ಅವರು ಅಂದುದಕ್ಕೆ ಸರಿ ಎಂದು ತಲೆ ಅಲ್ಲಾಡಿಸಿ ಬಿಡಬೇಕು. ಮರ್ತ್ಯಲೋಕದ ಜೀವನದಲ್ಲಿ ಈ ರೀತಿ ಸಮಯ ಪ್ರಜ್ಞೆಯಿಂದ ವರ್ತಿಸಿದರೆ ಗೆಲವು ಸಾಧ್ಯವಾಗುತ್ತದೆ.

383. ನಿಜದೇವರ ಅರಿವು

ಮೊಲೆಮುಡಿಯಿದ್ದಡೇನು ಮೂಗಿಲ್ಲದವಳಿಂಗೆ?
ತಲೆಯ ಮೇಲೆ ಸೆರಗೇತಕ್ಕೆ ಸಹಜಸಂಕಲ್ಪವಿಲ್ಲದವಳಿಂಗೆ?
ಜಲದೊಳಗೆ ಹುಟ್ಟಿ ಗುಳ್ಳೆಜಾತಿಸ್ಮರತ್ವವರಿದಿತ್ತು.
ಹಲನರ ಹಾದಿಯೊಳು ಹರಿಸುರರ್ಗೆ ನಿಮ್ಮ ನೆಲೆಯ ತೋರಿದೆ
ಶ್ರೀಗಿರಿ ಚೆನ್ನಮಲ್ಲಿಕಾರ್ಜುನದೇವರ ದೇವಾ.

ಭಾವಾರ್ಥ- ಹಿಂದಿನ ಕಾಲದಲ್ಲಿ ಮಹಿಳೆಯರು ಅಪರಾಧವನ್ನು ಮಾಡಿದಾಗ ಅವರ ಮೂಗನ್ನು ಕತ್ತರಿಸುವ ಶಿಕ್ಷೆ ವಿಧಿಸುತ್ತಿದ್ದರು. ಅಂಥ ಮೂಗಿಲ್ಲದವಳಿಗೆ ಸ್ತನಗಳು, ಒಳ್ಳೆಯ ಕೂದಲು ಇದ್ದರೂ ಪ್ರಯೋಜನವಿಲ್ಲ; ಚಂದವಾಗಿ ಕಾಣುವುದಿಲ್ಲ. ಮಾನಸಿಕ ದೌರ್ಬಲ್ಯ ಇರುವ ಮಹಿಳೆ ತಲೆಯ ಮೇಲೆ ಸೆರಗು ಹಾಕಿಕೊಂಡು ಓಡಾಡಿದರೂ ಪ್ರಯೋಜನವಿಲ್ಲ. ನೀರಿನಲ್ಲಿ ಹುಟ್ಟಿದರೂ ಗುಳ್ಳೆಗಳು ನೀರಿನಿಂದ ಬೇರೆಯಾಗಿ ಬದುಕುವವು. ಹರಿ, ಸುರರು ಸಹ ನಿಜವಾದ ದೇವರನ್ನು ಅರಿಯಲು ಅಸಮರ್ಥರಾದರು.

384. ನಿಜವಾದ ಗುರುವಿನ ಸ್ವರೂಪ

ರವಿಯ ಕಾಳಗವ ಗೆಲಿದು, ಒಂಬತ್ತು ಬಾಗಿಲ ಮುರಿದು,
ಅಷ್ಟಧವಳಾರಮಂ ಸುಟ್ಟು, ಮೇಲುಪ್ಪರಿಗೆಯ ಮೆಟ್ಟಿ,
ಅಲ್ಲ-ಅಹುದು ಉಂಟು-ಇಲ್ಲ, ಬೇಕು-ಬೇಡೆಂಬ
ಆರರಿತಾತನೆ ಗುರು ತಾನೆ ಬೇರಿಲ್ಲ.

ದ್ವಯಕಮಳದಲ್ಲಿ ಉದಯವಾದ
ಚೆನ್ನಮಲ್ಲಿಕಾರ್ಜುನದೇವರ ದೇವಾ.

ಭಾವಾರ್ಥ– ಅಂತರಂಗದಲ್ಲಿ ಅಜ್ಞಾನದಿಂದ ಮನಸ್ಸಿನಲ್ಲಿ ಹೊಯ್ದಾಟ ನಡೆದಿರುತ್ತದೆ. ಸಾಧಕನು ಎಲ್ಲ ಕಾಳಗಗಳನ್ನು ಗೆಲ್ಲಬೇಕು. ನವ ದ್ವಾರಗಳನ್ನು ನಿಯಂತ್ರಿಸಬೇಕು. ಎಂಟು ಮದಗಳನ್ನು ಸುಟ್ಟು ಹಾಕಬೇಕು. ದೇಹದಲ್ಲಿ ಅತ್ಯಂತ ಎತ್ತರದ ಸ್ಥಾನವಾದ ಸಹಸ್ರಾರ ಚಕ್ರವನ್ನು ಸಾಧಕನ ಜೀವ ಹಂಸವು ಸೇರಬೇಕು. ಅಲ್ಲ– ಅಹುದು, ಬೇಕು–ಬೇಡ ಎಂಬ ದ್ವಂದ್ವವನ್ನು ಗೆಲಿದು ನಿರ್ಲಿಪ್ತ, ನಿರ್ವಿಕಾರ ಸ್ಥಿತಿಯನ್ನು ಪಡೆಯಬೇಕು. ಆರು ಸ್ಥಲಗಳನ್ನು ಅರಿತು ಆರು ಲಿಂಗಗಳನ್ನು ಜ್ಞಾನದಿಂದ ಆರಾಧಿಸುವವನೇ ನಿಜವಾದ ಗುರುವು ಆಗ ಪರಮಾತ್ಮನು ಎರಡು ದಳಗಳಿಂದ ಕೂಡಿದ ಭ್ರೂಮಧ್ಯದ ಆಜ್ಞಾ ಚಕ್ರದಲ್ಲಿ ವ್ಯಕ್ತವಾಗುವನು, ಪ್ರಕಾಶಿಸುವನು.

385. ನಿಜ ಜ್ಞಾನಿಯ ಸ್ವರೂಪ

ಲಿಂಗಪೂಜಕಂಗೆ ಫಲಪದಂಗಳಲ್ಲದೆ ಲಿಂಗವಿಲ್ಲ!
ಧರ್ಮತ್ಯಾಗಿಗೆ ನರಕವಲ್ಲದೆ ಲಿಂಗವಿಲ್ಲ!
ವೈರಾಗ್ಯಸಂಪನ್ನಂಗೆ ಮುಕ್ತಿಯಲ್ಲದೆ ಲಿಂಗವಿಲ್ಲ!
ಜ್ಞಾನಿಗೆ ಪರಿಭ್ರಮಣವಲ್ಲದೆ ಲಿಂಗವಿಲ್ಲ!
ಇಂತಪ್ಪ ಭ್ರಾಂತವನತಿಗಳೆದು ತಾನುತಾನಾದ ಇರುವೆಂತೆಂದಡೆ;
ದ್ವೈತವಳಿದು ಅದ್ವೈತದಿಂದ ತನ್ನ ತಾನರಿದಡೆ
ಚೆನ್ನಮಲ್ಲಿಕಾರ್ಜುನದೇವರ ಲಿಂಗವು ತಾನೆ.

ಭಾವಾರ್ಥ– ಸ್ಥಾವರ ಲಿಂಗಗಳ ಪೂಜಕರಿಗೆ ಕೈಲಾಸ, ಸಾಲೋಕ್ಯ ಮುಂತಾದ ಪದಗಳು ಸಿಗುತ್ತವೆಯೇ ಹೊರತು ಪರಮಾತ್ಮನ ಜ್ಞಾನ ಸಿಗುವುದಿಲ್ಲ. ಧರ್ಮವನ್ನು ಪಾಪ–ಪುಣ್ಯಗಳ ಭಯವನ್ನು ತ್ಯಜಿಸಿದ ಮಾನವರಿಗೆ ನರಕವು ಪ್ರಾಪ್ತಿಯಾಗುತ್ತದೆ. ಜ್ಞಾನ–ಭಕ್ತಿ ಅಳವಡಿಸಿಕೊಳ್ಳದೆ ಕೇವಲ ವೈರಾಗ್ಯ ಭಾವ ತಾಳಿದವನಿಗೆ ಮುಕ್ತಿ ಸಿಗಬಹುದೇ ವಿನಾ ಪರಮಾತ್ಮನ ಅನುಗ್ರಹ, ಜ್ಞಾನ ಸಿಗುವುದಿಲ್ಲ. ದೇವರಲ್ಲಿ ಶರಣಾಗತಿ., ಭಕ್ತಿ ಇಲ್ಲದೆ ಕೇವಲ ಶಾಸ್ತ್ರಜ್ಞಾನ ಪಡೆದ ಸಾಧಕನಿಗೆ ಜನ್ಮಜನ್ಮಕ್ಕೆ ಪರಿಭ್ರಮಣವಲ್ಲದೆ ಪರಮಾತ್ಮನ ಅನುಗ್ರಹ ಸಿಗದು. ಇಂಥ ಎಲ್ಲ ಭ್ರಾಂತಿಯನ್ನು ದಾಟಿ ತಾನೇ ತಾನಾಗಿ ಇರುವ ಸಾಧಕನು ದೈವಭಾವ ಕಳೆದುಕೊಂಡು ಅದ್ವೈತ ಭಾವ ಅನುಭವಿಸುವನು. ಅವನು ದಿವ್ಯಾವನುಭವ ಪಡೆಯುವನು. (ಮುಂದುವರಿಯುವುದು..)

ಸ್ವತಂತ್ರ ಲಿಂಗಾಯತ ಧರ್ಮದ ಲಕ್ಷಣಗಳು

– ಪೂಜ್ಯ ಶ್ರೀ ಜಗದ್ಗುರು ಬಸವಕುಮಾರ ಸ್ವಾಮೀಜಿ

15.ಪರಂಪರೆ:– ಗುರು ಬಸವಣ್ಣನವರಿಂದ ಮೊದಲ್ಗೊಂಡು ಆ ಪರಂಪರೆಯಲ್ಲಿ ಸಾಗಿ ಬಂದ ಶರಣ ಪರಂಪರೆ. ಜಗತ್ತಿನಲ್ಲಿ ಸಾವಿರಾರು ಪರಂಪರೆಗಳಿವೆ 12ನೇ ಶತಮಾನದಲ್ಲಿ ಗುರು ಬಸವಣ್ಣನವರು ವಿನೂತನವಾದ ಲಿಂಗಾಯತ ಧರ್ಮವನ್ನು ಸಂಸ್ಥಾಪಿಸಿ ಶರಣ ಪರಂಪರೆಯನ್ನು ಪ್ರಾರಂಭಿಸಿದರು. ಸೂರ್ಯಚಂದ್ರರಿರುವರೆಗೆ ನಡೆದುಕೊಂಡು ಹೋಗುವ ಸತ್ ಪರಂಪರೆ. ಅಂದು ಪ್ರಾರಂಭವಾದದ್ದು ಎಡೆಯೂರು ಸಿದ್ಧಲಿಂಗೇಶ್ವರ ಯತಿಗಳ ವರೆಗೆ ಸಾಗಿಬಂದು 101 ವಿರಕ್ತರನ್ನು ಇದ್ದರಡಿಯಲ್ಲಿ ಭದ್ರಗೊಳಿಸಿದರು. ಶಿವಯೋಗಿಗಳು ಶರಣರು ಉಳಿಸಿಕೊಂಡು ಬಂದದ್ದನ್ನು 19ನೇ ಶತಮಾನದಲ್ಲಿ ಡಾ॥ ಫ.ಗು ಹಳಕಟ್ಟಿಯವರು ತುಂಬಾ ಕಷ್ಟವಹಿಸಿ ವಚನ ಕಟ್ಟುಗಳನ್ನು ಊರು ಊರುಗಳಲ್ಲಿ ಸಂಚರಿಸಿ ಕೂಡು ಹಾಕಿ ಹಸ್ತ ಪ್ರತಿ ತಯಾರಿಸಿ ಮನೆ ಮನೆಯನ್ನು ಮಾರಿ 'ಹಿತಚಿಂತಕ' ಎಂಬ ಮುದ್ರಣಾಲಯವನ್ನು ಹಾಕಿ ಪ್ರಿಂಟಿಂಗ್ ಕಾರ್ಯ (ಮುದ್ರಣ) ಕೈಗೊಂಡರು. ನಂತರ ಮತ ಮಾನ್ಯಗಳಿಗೆ, ವಿಶ್ವವಿದ್ಯಾಲಯಗಳಿಗೆ ಹಂಚಿ "ವಚನ ಪಿತಮಹಾ" ವೆಂದು ಬಿರುದು ಪಡೆದರು. ಶರಣ ಪರಂಪರೆ ಉಳಿಸಿದರು.

16.ಧಾರ್ಮಿಕ ಸಹೋದರತ್ವ:– ಯಾವುದೇ ಜಾತಿ, ಮತ, ವರ್ಗ, ಲಿಂಗಭೇದ ಇರದ ಸಮಾನತೆ. ಲಿಂಗಾಯತ ಧರ್ಮವು ಇಡೀ ಜಗತ್ತಿನಲ್ಲಿಯೇ ವಿಶೇಷತೆಯನ್ನು ಹೊಂದಿದ ಅಪರೂಪದ ಧರ್ಮ. ಇದರಲ್ಲಿ ಯಾವುದೇ ತರಹದ ನ್ಯೂನ್ಯತೆಯಿಲ್ಲದ್ದಾಗಿದೆ. ಜಾಗತಿಕ ಧರ್ಮಗಳಾದ ಜೈನ, ಬೌದ್ಧ, ಶಿಖ್, ಇಸ್ಲಾಂ, ಕ್ರಿಶ್ಚಿಯನ್ ಧರ್ಮಗಳಲ್ಲಿ ಒಂದೊಂದು ನ್ಯೂನ್ಯತೆಗಳಿವೆ. ಜೈನ ಧರ್ಮವು ನಿರೀಶ್ವರವಾದದು. ಸೃಷ್ಟಿಕರ್ತನೊಬನಿದ್ದಾನೆ ಎಂದು ನಂಬುವುದಿಲ್ಲ. ಹಾಗಂತ ನಾಸ್ತಿಕವಾದದ್ದಲ್ಲ. ಪಾಪ–ಪುಣ್ಯ, ಸ್ವರ್ಗ–ನರಕ, ಪೂರ್ವ–ಪುರ್ನಜನ್ಮವನ್ನು ಆತ್ಮವನ್ನು ನಂಬುತ್ತಾರೆ. ನಿರಾಕಾರ ದೇವನ ಪೂಜೆಗೆ ಅವಕಾಶವಿಲ್ಲ. ಬೌದ್ಧ ಧರ್ಮವು ಅಜ್ಞೇಯ ವಾದವನ್ನು ನಂಬುವುದು. ದೇವರು ಇದಾನೊ–ಇಲ್ಲವೊ ಎಂದರೆ ನಿಸಂದೇಹಿಸುವುದು. ಶಿಖ್ ಧರ್ಮ ಏಕೇಶ್ವರ ವಾದವನ್ನು ಒಪ್ಪಿದರೂ ಸಹಿತ ನಿರಾಕಾರ ದೇವ (ಸತ್‌ನಾಮ ಸಾಕ್ಷಿ)ನನ್ನು ಪೂಜಿಸಲು ಯಾವುದೇ ಕುರುಹನ್ನು ಕೊಟ್ಟಿಲ್ಲ. ಧರ್ಮಲಾಂಛನಗಳು ಐದು. ಕೈಕಡಗ, ಕತ್ತಿ, ಕೃಪಾಣ, ನೆತ್ತಿಯ ಕೂದಲು ಜುಟ್ಟು ಕಟ್ಟಿ ಪೇಟಾ ಹಾಕುವುದು ದಾಡಿ ಬಿಡುವುದು ಇವು ಗಂಡಸರಿಗೆ ಮಾತ್ರ, ಹೆಣ್ಣು ಮಕ್ಕಳಿಗಿಲ್ಲ. ಗಂಡು ಮಕ್ಕಳು ಹೇಳುತ್ತಾರೆ 'ದುನಿಯಾ ಕೊ ಮಾಲೂಮ್ ಹೋನಾ ಚಾಹಿಯೇ ಹಮ್ಮ ಶಿಖ್‌ಲೋಗ ಹೈ' ಅಂತಾ. ಇಸ್ಲಾಂ ಧರ್ಮ ಏಕೇಶ್ವರವಾದವನ್ನು ಕಡ್ಡಾಯವಾಗಿ ಒಪ್ಪಿದರೂ ನಿರಾಕಾರ ದೇವನನ್ನು ಪೂಜಿಸಲು ಯಾವುದೇ ಕುರುಹು ನೀಡಲಾಗಿಲ್ಲ. ಪ್ರಾರ್ಥನೆ–ಧ್ಯಾನ ಮಾಡುತ್ತಾರೆ. ಮಸ್‌ಜಿದ್‌ಗಳಲ್ಲಿ ಹೆಣ್ಣು ಮಕ್ಕಳಿಗಿಲ್ಲ ಅವಕಾಶ ಪ್ರಾರ್ಥನೆಗಾಗಿ ಮನೆಯಲ್ಲಿಯೇ ಮಾಡಬೇಕು. ಯಾರಾದರೂ ನಿಧನರಾದರೆ ಸ್ಮಶಾನಕ್ಕೆ ಹೋಗುವಾಗ ಗಂಡು ಮಕ್ಕಳಿಗೆ ಮಾತ್ರ ಅವಕಾಶ. ಹೆಣ್ಣು ಮಕ್ಕಳಿಗಿಲ್ಲ ಸದವಾಕಾಶ. ಕ್ರಿಶ್ಚಿಯನ್ ಧರ್ಮ ಏಕೇಶ್ವರ ವಾದವನ್ನು ಒಪ್ಪುವುದು.

ಆದರೆ ಪೂಜಾ ಕ್ರಿಯೆಗೆ ಸಾಧನವನ್ನು ಕೊಡಮಾಡಿಲ್ಲ. ಗಂಡಸರು ಮಾತ್ರ ಪೋಪ್ (ಧರ್ಮ ಗುರು) ಆಗಲು ಅವಕಾಶ. ಹೆಣ್ಣು ಮಕ್ಕಳಿಗಿಲ್ಲ ಆ ಭಾಗ್ಯವು. ಲಿಂಗಾಯತ ಧರ್ಮವು ಏಕೇಶ್ವರ ವಾದವನ್ನು ಕಡ್ಡಾಯವಾಗಿ ಒಪ್ಪಿ ಸೇಶ್ವರವಾದವನ್ನು ಎತ್ತಿ ಹಿಡಿದಿದೆ. ಒಪ್ಪುವುದರ ಜೊತೆಗೆ ಇಷ್ಟಲಿಂಗವೆಂಬ ಹೊಳಪುಳ್ಳ ಕಾಂತಿಯುಕ್ತವಾದ ಕುರುಹನ್ನು ವೈಜ್ಞಾನಿಕ, ವೈಚಾರಿಕವಾಗಿ ಸಂಶೋಧನೆಗೆ ಒಳಪಟ್ಟು ಪೂಜೆಗೆ ಕೊಡಮಾಡಿದೆ. ಮಾನವ ಮಾತ್ರ ಯಾರಾದರೂ ಆಗಲಿ ದೀಕ್ಷೆ ಪಡೆದು ಪೂಜಿಸಲು ಸದವಕಾಶವುಂಟು ಜಾತಿಯ ಕಟ್ಟು ನೇಮಗಳಿಲ್ಲ. ಯಾವುದೇ ಮತದವರೂ ಈ ಧರ್ಮ ಸ್ವೀಕರಿಸಬಹುದು. ಶ್ರೀಮಂತ-ಬಡವ, ಸಣ್ಣವರು-ದೊಡ್ಡವರು, ವಿಕಲರು-ಅಂಗವಿಕಲರು, ಎಂಬ ಭೇದಭಾವವಿಲ್ಲ. ಸ್ತ್ರೀ-ಪುರುಷರೆಂಬ ಲಿಂಗ ಭೇದವಿಲ್ಲ. ಜಗತ್ತಿನಲ್ಲಿ ಯಾವ ಧರ್ಮದಲ್ಲಿರಲಾರದಂತಹ ಒಂದು ವಿಶೇಷತೆ ಇದೆ. ಅದೇ ಹೆಣ್ಣು ಮಕ್ಕಳೂ ಸಹ ಇಷ್ಟಲಿಂಗ ದೀಕ್ಷೆ ಹೊಂದಿ ಕಾವಿ ಧಾರಿಗಳಾಗಿ ಗುರುವಾಗಬಹುದು, ಜಂಗಮರಾಗಬಹುದು, ಸದ್ಗುರುವಾಗಬಹುದು, ಜಗದ್ಗುರುವಾಗಬಹುದು, ಇಷ್ಟ ಏಕೆ? ಮಹಾಜಗದ್ಗುರುವಾಗಲೂಬಹುದು. ಇದಕ್ಕೆ ಸರ್ವಸಾಕ್ಷಿಯಾಗಿ ವಿಶ್ವದ ಪ್ರಪ್ರಥಮ ಮಹಿಳಾ ಮಹಾಜಗದ್ಗುರು ಶ್ರೀ.ಮ.ನಿ. ಪ್ರಣವ ಸ್ವರೂಪಿ ಡಾ. ಮಾತೆ ಮಹಾದೇವಿಯವರಿದ್ದಾರೆ. ಪರಿಪೂರ್ಣವಾದ ಧಾರ್ಮಿಕ-ಸಾಮಾಜಿಕ ಮುಕ್ತವಾದ ಸಮಾನತೆ ಇದೆ.

17.ಧರ್ಮದ ಧ್ಯೇಯ:- ಜಾತಿ, ವರ್ಣ, ವರ್ಗ ರಹಿತ, ಧರ್ಮ ಸಹಿತ, ಶರಣ ಸಮಜ ನಿರ್ಮಾಣ, ಕಲ್ಯಾಣ ರಾಜ್ಯ ನಿರ್ಮಾಣ. ಲಿಂಗಾಯತ ಧರ್ಮದಲ್ಲಿ ದೇವ ನಿರ್ಮಿತವಲ್ಲದ ಮಾನವ ಕಲ್ಪಿತ ಜಾತಿ-ಭೇದವಿಲ್ಲ. ದಕ್ಷಿಣ ಆಫ್ರಿಕಾದಲ್ಲಿ ಕರಿಯರು-ಬಿಳಿಯರು ಎಂಬ ವರ್ಣ ಭೇದವಿದೆ ಇತ್ತು. ಗೃಹಸ್ಥರು-ಸನ್ಯಾಸಿ ಎಂಬ ವರ್ಣ ಭೇದವಿಲ್ಲ. ನಮ್ಮ ಭಾರತ ದೇಶದಲ್ಲಿ ಮೀಸಲಾತಿ ಸಮಾನತೆ ಕೊಡುತ್ತಾರೆ. ರಾಜಕೀಯ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕವಾಗಿ. ಆದರೆ ಧಾರ್ಮಿಕ ಸಂಸ್ಕಾರವಿಲ್ಲ. ಆದರೆ ಲಿಂಗಾಯತ ಧರ್ಮದಲ್ಲಿ ಸಾಮಾಜಿಕ ಸಮಾನತೆಯೊಂದಿಗೆ ಧಾರ್ಮಿಕ ಸಮಾನತೆಯನ್ನು ವಿಶೇಷವಾಗಿದೆ. ಈ ತತ್ವ ಸಿದ್ಧಾಮತದ ಮೇಲೆ ಶರಣ ಸಮಾಜವನ್ನು ವ್ಯಕ್ತಿ ಕಲ್ಯಾಣ, ಕುಟುಂಬ ಕಲ್ಯಾಣ, ರಾಷ್ಟ್ರ ಕಲ್ಯಾಣ, ವಿಶ್ವ ಕಲ್ಯಾಣ ಬಯಸಿ ಕಲ್ಯಾಣ ರಾಜ್ಯ ಕಟ್ಟುವ ಉತ್ತಮ ಧ್ಯೇಯವಾಗಿದೆ.

ಮೇಲೆ ತಿಳಿಸಿದ 17 ಲಕ್ಷಣಗಳು ಪರಿಪೂರ್ಣವಾಗಿದ್ದು, ಜಾಗತಿಕ ಧರ್ಮವಾಗಿದ್ದು, ಈ ಎಲ್ಲ ಕಾರಣಗಳಿಂದ, ಕಾರಣಗಳಿಗಾಗಿ ಲಿಂಗಾಯತವನ್ನು ಸ್ವತಂತ್ರ ಧರ್ಮವೆಂದು ಘೋಷಿಸಿ ನಮ್ಮ ಭಾರತದ ಕೇಂದ್ರ ಸರಕಾರವು ಮಾನ್ಯತೆ ನೀಡಬೇಕೆಂದು ಗೌರವಿಸಬೇಕೆಂದು ಕಳಕಳಿಯ ಪ್ರಪ್ರಥಮ ಬಿನ್ನಹವಾಗಿದೆ. ಎರಡನೆಯದಾಗಿ ನಮ್ಮ ಸಮಾಜದಲ್ಲಿಯೂ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ರಾಜಕೀಯವಾಗಿ ಹಿಂದುಳಿದ ಧಾರ್ಮಿಕ ಅಲ್ಪ ಸಂಖ್ಯಾತರಿವರೆಂದು ಮನ್ನಣೆ ನೀಡಬೇಕು. ಜೈನ, ಬೌದ್ಧ, ಶಿಖ್, ಇಸ್ಲಾಂ, ಕ್ರಿಶ್ಚಿಯನ್, ಹಿಂದೂ ಧರ್ಮಗಳಿಗೆ ಕೋಡ ನಂಬರ್ ಕೊಟ್ಟಂತೆ ನಮ್ಮ ಲಿಂಗಾಯತ ಧರ್ಮಕ್ಕೆ ಕೋಡ್ ನಂಬರ್ ಕೊಡಬೇಕೆಂದು ಮೂರನೆಯ ಬೇಡಿಕೆಯಾಗಿದೆ. ಕಾನೂನಾತ್ಮಕವಾಗಿಯೂ ಎಲ್ಲಾ ಅಂಶಗಳನ್ನು ಹೊಂದಿರುವುದರಿಂದಲೂ ಸಹ ನಮ್ಮ ಬೇಡಿಕೆಯನ್ನು ಮನ್ನಿಸಲು ಕೋರುತ್ತೇವೆ.

ಶರಣು ಬನ್ನಿ

-ಮಾತೆ ಕಸ್ತೂರಿದೇವಿ.

ಭಾವಭ್ರಮೆವಂತರು ಬಾರದಿರಿ,
ಜ್ಞಾನಹೀನರು ಬೇಗ ಹೋಗಿ,
ತ್ರಿವಿಧ ಮಲಕ್ಕೆ ಕದ್ದುಮುಚ್ಚಿ ಹೊಡೆದಾಡುವರತ್ತಲಿರಿ.
ನಿರುತ ಸ್ವಯಾನುಭಾವರು ಬನ್ನಿ,
ಪರಬ್ರಹ್ಮಸ್ವರೂಪರು ಬನ್ನಿ,
ಏಕಲಿಂಗನಿಷ್ಠಾಪರ ದೃಢವಂತರು ಬನ್ನಿ,
ಸನ್ಮಾರ್ಗ ಸತ್ಕ್ರಿಯಾವಂತರು ಬನ್ನಿ,
ಎಂದು ಎನಗೆ ಕೊಟ್ಟ ಕಾಯಕ
ಕೂಡಲಸಂಗಮದೇವರಲ್ಲಿ ಬಸವಣ್ಣ.
-ಉಗ್ಘಡಿಸುವ ಕಾಯಕದ ಗಬ್ಬಿದೇವಯ್ಯನವರು

ಈ ಲೇಖನದ ಶೀರ್ಷಿಕೆ ಶರಣು ಬನ್ನಿ ಎಂದರೆ ಗುರು ಬಸವವಾಣಿಯಂತೆ ಬಾಗಿದ ತಲೆ; ಮುಗಿದ ಕೈಯಾಗಿಸಿರಿಕೊಂಡು ಮನೆ-ಮಠಕ್ಕೆ ಬರುವವರನ್ನು ಶರಣು ಎಂದು ಹೇಳಿ ಸ್ವಾಗತಿಸುವುದು. ಇದು ಅಚ್ಚ ಶರಣ ಸಂಸ್ಕೃತಿಯ ಶೈಲಿ. ಗುರು ಬಸವಣ್ಣನವರ ಅನೇಕ ವಚನಗಳಲ್ಲಿ ಶರಣರನ್ನು ಹೃತ್ಪೂರ್ವಕವಾಗಿ ಸ್ವಾಗತಿಸುವ ಕಾಳಜಿ ವ್ಯಕ್ತವಾಗುತ್ತದೆ. ಆದರೆ ಇಂದು ನಾವು ನೋಡುತ್ತೇವೆ. ಸಾಮಾನ್ಯವಾಗಿ ದೊಡ್ಡ ಸಂಸ್ಥೆಗಳಲ್ಲಿ, ಮಠಗಳಲ್ಲಿ, ಆಸ್ಪತ್ರೆಗಳಲ್ಲಿ ನಾವೇ ಸ್ವಾಗತಕಾರರಲ್ಲಿಗೆ ಹೋಗಿ ವಿಚಾರಿಸಿ, ಅಗತ್ಯ ಮಾಹಿತಿಯೊಂದಿಗೆ ಅನುಮತಿ ಪಡೆದು, ಸಂಬಂಧಪಟ್ಟವರನ್ನು ಭೇಟಿ ಮಾಡಬೇಕು. ಇಂಥವರನ್ನು ಸೂಕ್ತ ಸಂಭಾವನೆ ಕೊಟ್ಟು ನೇಮಿಸಿರುತ್ತಾರೆ. ಈಗ ಬಹಳಷ್ಟು ಕಡೆ ಮೊದಲೆ ನಿಗದಿತ ಸಮಯ ಮತ್ತು ದಿನವನ್ನು ಗೊತ್ತು ಮಾಡಿದ ನಂತರವೇ ಪ್ರವೇಶ ಸಿಗುತ್ತದೆ. ಇನ್ನು ಕಲ್ಯಾಣ ಮಂಟಪಗಳಲ್ಲಿ ಮುಂಬಾಗಿಲ ಬಳಿ ನಿಂತು ಬಂದವರಿಗೆ ಯಾಂತ್ರಿಕವಾಗಿ ಕೈಮುಗಿದು, ಪನ್ನೀರು ಚಿಮುಕಿಸಿ, ಕೈಗೊಂದು ಗುಲಾಬಿ ಕೊಟ್ಟು, ಸ್ವಾಗತಿಸಲು ಗುತ್ತಿಗೆಗೆ ಜನರನ್ನು ನೇಮಿಸುವ ಪದ್ಧತಿ ಜಾರಿಗೆ ಬಂದಿದೆ. ಅಲ್ಲದೆ ಮದುವೆ ಮಂಟಪದ ಮುಂದೆ ಸುಖಾಗಮನ, ಸುಸ್ವಾಗತ, *Well Come* ಎಂಬ ಮಿಂಚುವ ವಿದ್ಯುತ್ ಫಲಕಗಳು ಕಾಣಬರುತ್ತಿದ್ದು ಇವು ಸ್ವಾಹತಕಾರರ ಶ್ರಮ, ಸಮಯವನ್ನು ಉಳಿಸುತ್ತವೆ. ಇನ್ನು ಕೆಲವು ಕಡೆ ಮುಂಬಾಗಿಲ ಮೆಟ್ಟಿಲ ಎರಡು ಬದಿಗಳಲ್ಲಿ ಇಟ್ಟ ಹಾಸ್ಯದ ದೊಡ್ಡ ಬಣ್ಣಬಣ್ಣದ ಬೊಂಬೆಗಳು ಅಥವ ಕೈ ಮುಗಿದ ಭಂಗಿಯ ಗೊಂಬೆಗಳು ಬಂದವರನ್ನು ಸ್ವಾಗತಿಸುತ್ತವೆ. ಮನೆಯವರೇ ನಿಂತು ಬಂದವರನ್ನು ನೇರವಾಗಿ ಪ್ರೀತಿ-ವಿಶ್ವಾಸ-ನಗುಮುಖದಿಂದ ಸ್ವಾಗತಿಸುವ ಸಂಸ್ಕಾರ ಈಗಿನ ಯಾಂತ್ರಿಕ ಮತ್ತು ಅತ್ಯವಸರದ ಯುಗದಲ್ಲಿ ಮರೆಯಾಗುತ್ತಿದೆ. ಎಲ್ಲ ಅನುಕೂಲಗಳು ಹಣಕ್ಕೆ ಸಿಗುತ್ತಿರುವ ಈ ಕಾಲದಲ್ಲಿ ಬಂದವರನ್ನು ವೈಯಕ್ತಿಕವಾಗಿ ಸ್ವಾಗತಿಸಿ,

ವಿಚಾರಿಸಿಕೊಳ್ಳುವುದು ವ್ಯರ್ಥ ಪರಿಶ್ರಮ ಎಂಬ ಭಾವ ಇಂದಿನವರಲ್ಲಿ ಮನೆ ಮಾಡಿದೆ. ಮತ್ತೆ ಕೆಲವು ಕಡೆ ಏಜನ್ಸಿಯಿಂದ ನೇಮಕ ಆಗಿರುವ ಭದ್ರತಾ ಸಿಬ್ಬಂದಿಗೆ ಗೇಟಿನ ಬಳಿ ನಿಂತು ಬಾಗಿಲು ಹಾಕುವುದು- ತೆರೆಯುವುದು ಬಿಟ್ಟರೆ ಬೇರೇನೂ ಗೊತ್ತಿರುವುದಿಲ್ಲ. ಇದೆಲ್ಲಾ ಸ್ವಾಗತದ ಮಾತಾಯಿತು.


ಹನ್ನೆರಡನೆ ಶತಮಾನದಲ್ಲಿ, ಈಗಿನ ಬಸವ ಕಲ್ಯಾಣದಲ್ಲಿ ಗುರು ಬಸವಣ್ಣನವರಿಂದ ಸ್ಥಾಪಿತವಾಗಿದ್ದ, ಜಗತ್ತಿನ ಮೊಟ್ಟ ಮೊದಲ ಪಾರ್ಲಿಮೆಂಟ್ ಎಂಬ ಖ್ಯಾತಿಗೆ ಪಾತ್ರವಾಗಿದ್ದ, ವ್ಯಕ್ತಿ, ಧರ್ಮ, ಸಮಾಜ, ರಾಷ್ಟ್ರ, ವಿಶ್ವದ ಪರಿಪೂರ್ಣ ಕಲ್ಯಾಣವನ್ನು ಪ್ರತಿನಿಧಿಸುತ್ತಿದ್ದ ವಿನೂತನ, ಅಭೂತ ಪೂರ್ವ ಸಂಸ್ಥೆ ಅನುಭವ ಮಂಟಪ. ಈ ಮಂಟಪದ ಪ್ರವೇಶದ್ವಾರದಲ್ಲಿ ನಿಂತು ಬಂದವರನ್ನು ಸ್ವಾಗತಿಸುವ ಕಾಯಕದಲ್ಲಿ ನಿರತರಾಗಿದ್ದವರು ಶರಣರಾದ ಉಗ್ಘಡಿಸುವ ಗ(ಬಿ)ಬ್ಬಿದೇವಯ್ಯನವರು. ಅಂದರೆ ಇಂಥ ಅದ್ಭುತ ಕಾಯಕವನ್ನು ಮೊಟ್ಟ ಮೊದಲಿಗೆ ಹುಟ್ಟು ಹಾಕಿದವರು ಈ ವಚನದ ಕೊನೆ ಸಾಲಿನಲ್ಲಿ ಹೇಳಿರುವಂತೆ ಗುರು ಬಸವಣ್ಣನವರು ಎಂದರೆ ತಪ್ಪಲ್ಲ.

ಸಾರ್ವಜನಿಕ ಸಂಸ್ಥೆ, ಮನೆ, ಮಠ ಯಾವುದೇ ಇರಲಿ ಒಳಗೆ ಬರುವವರಲ್ಲಿ ಅನೇಕ ಬಗೆಯ ಜನರುಂಟು. ಅಂಥವರಲ್ಲಿ ಕೆಲವರು ಕುತೂಹಲಕ್ಕಾಗಿ ಪ್ರವೇಶಿಸಿದರೆ, ಮತ್ತೆ ಕೆಲವರು ತಮ್ಮ ಸ್ವಾರ್ಥ ಸಾಧನೆಗಾಗಿ ಬರುತ್ತಾರೆ, ಮತ್ತೆ ಕೆಲವರು ಸಮಯಹರಣಕ್ಕಾಗಿ ಬರುವವರಿದ್ದಾರೆ. ಕೆಲವರು ಇನ್ನೊಬ್ಬರ ಸಮಯವನ್ನು ವ್ಯರ್ಥ ಮಾಡಲು ಬರುತ್ತಾರೆ. ಕೆಲವರು ದೂಷಿಸಲೆಂದೆ ಬರುತ್ತಾರೆ. ಅನುಮಾನದಿಂದ ಬರುವವರು ಇಲ್ಲದಿಲ್ಲ. ತಮ್ಮ ಹೊಟ್ಟೆ ತುಂಬಿಸಿಕೊಳ್ಳಲು ಬರುವ ಸೋಮಾರಿಗಳಿಗೂ ಕೊರತೆಯಿಲ್ಲ! ತಮಗಾಗಿ ಬರುವವರು, ತಾತ್ಕಾಲಿಕ ಆಶ್ರಯ, ದೀರ್ಘ ಆಶ್ರಯಕ್ಕಾಗಿ ಬರುವ ನಿರ್ಗತಿಕರು, ವ್ಯರ್ಥಕಾಯರು, ಆರಂಭಶೂರರು ಅಬ್ಬಬ್ಬಾ! ಒಬ್ಬರೇ? ಇಬ್ಬರೇ?! ಆದರೆ ಸಂಸ್ಥೆಯ ಧ್ಯೇಯೋದ್ದೇಶಗಳನ್ನು ಅರಿತು, ಅವುಗಳ ಸಾಧನೆಗಾಗಿ, ಹಿತೈಷಿಗಳಾಗಿ, ನೆರವಿನ ಹಸ್ತ ನೀಡುವವರು, ಆಧ್ಯಾತ್ಮ ಜೀವಿಗಳು ಮತ್ತು ತ್ಯಾಗಿಗಳು ಬರುವುದು ಅತ್ಯಲ್ಪ. ಇದನ್ನೆ ಗುರು ಬಸವಣ್ಣನವರು ಮಡಿವಾಳ ಮಾಚಿತಂದೆಯವರನ್ನು ಕುರಿತು ಹೀಗೆ ಸ್ತುತಿ ಮಾಡುತ್ತಾರೆ. 'ಧನಕ್ಕೆ ಮುನಿವರಲ್ಲದೆ, ಎನ್ನ ಮನಕ್ಕೆ ಮುನಿವವರಿಲ್ಲಯ್ಯಾ, ಧನಕ್ಕೆ ಮುನಿವವರಿಗೆ ಮುನಿದು, ಎನ್ನ ಮನಕ್ಕೆ ಮುನಿದ ಮಡಿವಾಳ ಮಾಚಯ್ಯನು' ಎಂದು. ಮತ್ತೊಂದು ಕಡೆ ಸ್ಮರಿಸುತ್ತಾರೆ 'ಲಿಂಗದೇವರಲ್ಲಿ ಎನಗಾರೂ ಇಲ್ಲವೆಂದು ಬೋಳಾದನೆನ್ನ ಪ್ರಭುದೇವರು' ಎಂದು. ಗುರು ಬಸವಣ್ಣನವರ ಬಳಿಗೆ ಬರುತ್ತಿದ್ದ ಹೆಚ್ಚಿನವರು ಹೆಣ್ಣುಮಣ್ಣುಹೊನ್ನಿನ ಆಕರ್ಷಣೆಗಾಗಿ ಬರುತ್ತಿದ್ದರೆಂದೂ, ಅಂಥ ಸ್ವಾರ್ಥಿಗಳನ್ನು ಗುರುತಿಸಿ ಹೊರಹಾಕುವ ಕೆಲಸವನ್ನು ಮಡಿವಾಳ ಮಾಚಿತಂದೆಯವರು ಸುಲಭವಾಗಿ ಮಾಡುತ್ತಿದ್ದರೆಂದು ಈ ಮಾತಿನಿಂದ ತಿಳಿಯುತ್ತದೆ. ಏಕೆಂದರೆ ಇಂಥವರು ಒಮ್ಮೆ ಒಳ ಹೊಕ್ಕರೆ ಹೊರಹಾಕುವುದು ಕಷ್ಟಸಾಧ್ಯ.

ಅನುಭವ ಮಂಟಪದಂಥ ಸಾರ್ವಭೌಮ ಸಂಸ್ಥೆಗೆ ಬರುತ್ತಿದ್ದ ಜನರಲ್ಲಿಯೂ ಎಲ್ಲಾ ಬಗೆಯವರು ಇರುತ್ತಿದ್ದರು. ಬಂದವರು ಅನುಭವ ಮಂಟಪದಿಂದ ಏನೂ

(ಪುಟ 18ರಲ್ಲಿ ಮುಂದುವರೆದಿದೆ)








ಪೂಜ್ಯ ಗಂಗಾಮಾತಾಜಿಯವರ ಪ್ರವಚನ ಸಮಾರೋಪ ಸಮಾರಂಭ









ಶರಣ ಬಂಧುಗಳೇ,

ರಾಷ್ಟ್ರೀಯ ಬಸವದಳಗಳು ಧರ್ಮಪಿತ ಬಸವಣ್ಣನವರ ತತ್ತ್ವದ ತಳಹದಿಯ ಮೇಲೆ ಸಂಸ್ಥಾಪಿಸಲ್ಪಟ್ಟ ಧರ್ಮ ಮತ್ತು ಸಾಹಿತ್ಯ ಹಾಗೂ ಸಾಮಾಜಿಕ ಸುಧಾರಣೆಗಳ ಜಾಡಿನಲ್ಲಿ ಪರಮ ಪೂಜ್ಯರಾದ ಅಪ್ಪಾಜಿಯವರ ಮತ್ತು ಮಾತಾಜಿಯವರ ಮಾರ್ಗದರ್ಶನದೊಂದಿಗೆ ಹೋರಾಟ ಮಾಡಿ, ನೈತಿಕತೆಯ ಬದ್ಧತೆಗೆ ಸಾಕ್ಷಿಯಾಗಿದೆ. ಪೂಜೆ, ಪ್ರಾರ್ಥನೆ, ಸತ್ಯಶುದ್ಧ ಕಾಯಕಕ್ಕೆ ಹೆಸರಾದ ನಾವು ಇಂದು ಅತಿ ಅಗತ್ಯದೊಂದಿಗೆ ಸಾಮಾಜಿಕ ಸಂಘಟನೆಯತ್ತ ಮುಖ ಮಾಡಬೇಕಾಗಿದೆ. ಕಾರಣ–ತಾವುಗಳು ನಿಮಗೆ ಸಂಬಂಧಪಟ್ಟ ಘಟಕ, ತಾಲ್ಲೂಕು ಮತ್ತು ಜಿಲ್ಲೆಯ ರಾಷ್ಟ್ರೀಯ ಬಸವದಳದ ಕಾರ್ಯ ಚಟುವಟಿಕೆಗಳು ಹಾಗೂ ಒಂದು ವರ್ಷದ ಕಾರ್ಯಕ್ರಮಗಳ ವಿವರ ದಿನಾಂಕ 14-01-2016 ರಿಂದ 14-01-2017 ರವರಗೆ ಮತ್ತು ಪದಾಧಿಕಾರಿಗಳ ಪಟ್ಟಿಯ ಜೊತೆಗೆ ಜಂಗಮವಾಣಿ ಸಂಖ್ಯೆ ಹಾಗೂ ಪೂರ್ಣ ವಿಳಾಸವನ್ನು ತಪ್ಪದೆ ದಿನಾಂಕ 15.05.2017 ರ ಒಳಗಾಗಿ ಕೆಳಗಿನ ವಿಳಾಸಕ್ಕೆ ಕಳಿಸಬೇಕಾಗಿ ಕೋರುತ್ತೇವೆ.

ಮುಂದಿನ ವಿಷಯಗಳು ಅಭಿವೃದ್ಧಿ ಚಿಂತನ ಗೋಷ್ಠಿಯಲ್ಲಿ ಚರ್ಚಿಸಲಾಗುವುದು.

ವಿಳಾಸ– ರಾಜ್ಯ ರಾಷ್ಟ್ರೀಯ ಬಸವ ದಳ, ಬಸವ ಮಂಟಪ, # 2035,
ಬಸವ ಮಂಟಪ ಮುಖ್ಯ ರಸ್ತೆ,
2ನೇ ಬ್ಲಾಕ್, 20 ನೇ ಮುಖ್ಯ ರಸ್ತೆ, ರಾಜಾಜಿನಗರ
ಬೆಂಗಳೂರು–560010

or Send Mail to rashtriyabasavadal12@gmail.com

ಪ್ರಧಾನ ಕಾರ್ಯದರ್ಶಿ
ಶರಣ. ದಿಲೀಪ್ ಬಿ.ಲಿಂಗಾಯತ್
ರಾಜ್ಯ ರಾಷ್ಟ್ರೀಯ ಬಸವ ದಳ
9035687072

ಪ್ರಧಾನ ಸಂಘಟನಾ ಕಾರ್ಯದರ್ಶಿ
ಶರಣ ಕೆ. ವೀರೇಶ ಕುಮಾರ್
ರಾಜ್ಯ ರಾಷ್ಟ್ರೀಯ ಬಸವ ದಳ
9964459500









ಪೂಜ್ಯ ಗಂಗಾಮಾತಾಜಿಯವರ ಪ್ರವಚನ ಸಮಾರೋಪ ಸಮಾರಂಭ



ಕಲಿಯದಿದ್ದರೂ ಬಂದವರಿಂದಲೇ ಶರಣರು ಸಾಕಷ್ಟು ಪಾಠ ಕಲಿಯುತ್ತಿದ್ದರೆಂದು ತೋರುತ್ತದೆ. ಏಕೆಂದರೆ ಗುರು ಬಸವಣ್ಣನವರು ಬಲು ಚಾಣಾಕ್ಷರು. ಆದ್ದರಿಂದ ಅವರು ತಾವು ಕಟ್ಟಿದ ಬಹು ಉದ್ದೇಶಿತ ಸಂಸ್ಥೆಗೆ 'ಅನುಭವ ಮಂಟಪ' ಎಂದು ಹೆಸರಿಟ್ಟಿದ್ದು. ಏಕೆಂದರೆ ವಾಸ್ತವವಾಗಿ ಒಳ್ಳೆಯದು-ಕೆಟ್ಟದ್ದು, ಲೌಕಿಕ, ಪಾರಲೌಕಿಕದಂಥ ಯಾವುದೆ ವಿಷಯ ಇರಲಿ ಸ್ವಾಧ್ಯಾಯ, ಸಾಧನೆ, ಉಪದೇಶಕ್ಕಿಂತಲೂ ಹೆಚ್ಚಾಗಿ ಮನವರಿಕೆಯಾಗುವುದು ಅನುಭವದಿಂದಲೆ ಎಂಬುದು ಅವರಿಗೆ ಚನ್ನಾಗಿ ಗೊತ್ತಿತ್ತು. ಇಲ್ಲಿ ಅನುಭವಗಳು ಧನಾತ್ಮಕ ಅಥವ ಋಣಾತ್ಮಕವಾಗಿರಬಹುದು ಎಂಬುದು ಅಷ್ಟೇ ಗಮನಾರ್ಹ. ಗುರು ಬಸವಣ್ಣನವರ ಹೃದಯ 'ಶರಣರ ಬರವೆನಗೆ ಪ್ರಾಣ ಜೀವಾಳ' ಎಂದು ಮಿಡಿದರೂ ಅನುಭವ ಮಂಟಪಕ್ಕೆ ಎಲ್ಲರಿಗೂ ಮುಕ್ತ ಪ್ರವೇಶಕ್ಕೆ ಅವಕಾಶವಿತ್ತು. ಇವರಲ್ಲಿ ಸಾಕಷ್ಟು ವ್ಯರ್ಥಕಾಯರು, ಜಡಮತಿಯರು ಇರುತ್ತಿದ್ದರು. ಹೀಗಾಗಿ ಬಂದವರನ್ನು ವಿಚಾರಿಸಿ, ಶೋಧಿಸಿ, ವಿಂಗಡಿಸುವ ಪವಿತ್ರ ಕಾರ್ಯವನ್ನು ಶರಣ ಗಬ್ಬಿದೇವಯ್ಯನವರು ವಹಿಸಿಕೊಂಡು ಗುರು ಬಸವಣ್ಣನವರ ಶ್ರಮ, ಸಮಯವನ್ನು ಉಳಿಸಿ, ಗುರುಸಂಕಲ್ಪವನ್ನು ಸಾರ್ಥಕವಾಗಿಸಿದ ಸಾಕಾರ ರೂಪವೆ ಈ ವಚನ ಎಂದರೆ ಅತಿಶಯೋಕ್ತಿಯಲ್ಲ.

ಗಬ್ಬಿದೇವಯ್ಯನವರು ಅನುಭವ ಮಂಟಪಕ್ಕೆ ಈಗ ಯಾರನ್ನು ಆಹ್ವಾನಿಸುತ್ತಿದ್ದಾರೆ? ಎಂಥವರು ಬರಬೇಕು ಎಂದು ಹಾರೈಸುತ್ತಿದ್ದಾರೆ? ಅಲ್ಲದೆ ಯಾರಿಗೆ ಪ್ರವೇಶ ನಿರಾಕರಿಸುತ್ತಿದ್ದಾರೆ? ಎಂಬುದನ್ನು ನೋಡೋಣ. ಮೊದಲಿಗೆ ಭಾವಭ್ರಮೆವಂತರು ಬಾರದಿರಿ ಅಂದರೆ ಬರದೆ ಇರಬೇಡಿ, ಮೊದಲು ನೀವು ಬನ್ನಿ ಎಂದು ಅಗ್ರ ಸ್ಥಾನವನ್ನು, ಪ್ರಥಮ ಆಹ್ವಾನವನ್ನು ಭಾವಭ್ರಮಿತರಿಗೆ ನೀಡಿದ್ದಾರೆ. ಭಾವಭ್ರಮೆಗಳು ಪರಸ್ಪರ ಅನ್ಯೋನ್ಯತೆಯನ್ನು ಕಾಯ್ದುಕೊಂಡು ತಮ್ಮ ಅಧಿಪತ್ಯವನ್ನು ಮಾನವನಲ್ಲಿ ಸ್ಥಾಪಿಸುತ್ತವೆ. ಇಲ್ಲಿ ಭಾವನೆಗಳು ಸತ್ಸಂಗ, ಶರಣರ ಅನುಭಾವದಿಂದ ಸದ್ಭಾವ, ಮಹಾಭಾವವಾಗಿ ಕರಿಗೊಂಡು ಶುದ್ಧವಾದಾಗ ಮಾತ್ರ ಎಲ್ಲಾ ರೀತಿಯ ಭ್ರಮೆಗಳು ಇನ್ನಿಲ್ಲದಂತೆ ಜಾಗ ಖಾಲಿ ಮಾಡುತ್ತವೆ. ಬದಲಿಗೆ ಹಲವು ಅಶುದ್ಧ ಭಾವಗಳು ಮನೆ ಮಾಡಿಕೊಂಡರೆ ಸರ್ವಭ್ರಮೆಗಳು ಮನಮತಿಗಳನ್ನು ಸಂಪೂರ್ಣವಾಗಿ ಆವರಿಸುತ್ತವೆ. ಅಜ್ಞಾನದಿಂದ ಹುಟ್ಟಿದ ಭಾವಭ್ರಮೆಗಳನ್ನು ಕೆಡಿಸಿದಲ್ಲದೆ ಪರಮಾತ್ಮನನ್ನು ಸೇರಲು ಸಾಧ್ಯವಿಲ್ಲ ಎಂಬುದೇ ಶರಣರ ಅಭಿಮತ. ಆದ್ದರಿಂದ ಜೀವನವನ್ನು ಅಜ್ಞಾನದಿಂದ ಕಳೆಯುವ ಬದಲು ಶರಣರ ಸಂಗದಲ್ಲಿ ಸೇರಿ, ಪರಿಶುದ್ಧ ಜ್ಞಾನ ಪಡೆದು, ಸದೃಢ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಅನುಭವ ಮಂಟಪದ ವ್ಯಾಪ್ತಿ ಪ್ರದೇಶದಿಂದ ಹೊರಗಿದ್ದವರಿಗೆ ಆಹ್ವಾನವಿತ್ತಿದ್ದಾರೆ.

ಜ್ಞಾನಹೀನರು ಬೇಗ ಹೋಗಿ ಎಂದು ಹೊರಗಿರುವ ಅಜ್ಞಾನಿಗಳಿಗೆ ಅನುಭವ ಮಂಟಪದ ಒಳಗೆ ಆದಷ್ಟು ಬೇಗ ಹೋಗಲು ಅತ್ಯವಸರ ಮಾಡುತ್ತಿದ್ದಾರೆ. ಸಭೆ ಸಮಾರಂಭಗಳಲ್ಲಿ ಕಾರ್ಯಕ್ರಮ ಪ್ರಾರಂಭವಾದರೂ, ಕಾರ್ಯಕ್ರಮಕ್ಕೆ ಬರದೆ ಅಲ್ಲಿ ಇಲ್ಲಿ ಹರಟೆ ಹೊಡೆಯುತ್ತಾ ನಿಂತಿರುವ ಜನರನ್ನು ಕಾರ್ಯಕರ್ತರು ಮೈಕಿನಲ್ಲಿ ಜೋರಾಗಿ ಕೂಗಿ ಕರೆದಂತೆ ಇಲ್ಲಿಯೂ ಅಂಥವರನ್ನು ಎಚ್ಚರಿಸುವ ಕ್ರಿಯೆ ಇದೆ. ಏಕೆಂದರೆ ಅಜ್ಞಾನದಿಂದ

ಹುಟ್ಟುವ ಸರ್ವದುಃಖಗಳನ್ನು ಪರಿಹರಿಸಿಕೊಂಡು ಹೊಸ ಬದುಕನ್ನು ರೂಪಿಸಿಕೊಳ್ಳಲು ಸಿಕ್ಕಿದ ಸದವಕಾಶವನ್ನು ಉಪಯೋಗಿಸಿಕೊಳ್ಳಲಿ ಎಂಬ ಕಳಕಳಿಯಿಂದ ಹೀಗೆ ಆಹ್ವಾನಿಸುತ್ತಿದ್ದಾರೆ.

ಮೂರನೆಯದಾಗಿ ತ್ರಿವಿಧ ಮಲಕ್ಕೆ ಕಚ್ಚಿಮುಚ್ಚಿ ಹೊಡೆದಾಡುವರತ್ತಲಿರಿ ಎಂದು ಒಂದು ಗುಂಪನ್ನು ದೂರ ಸರಿಸುತ್ತಿದ್ದಾರೆ. ತ್ರಿವಿಧ ಮಲ ಅಂದರೆ ಕಾರ್ಮಿಕ ಮಲ, ಮಾಯಾ ಮಲ ಮತ್ತು ಆಣವ ಮಲ. ಅನಾಚಾರವೆ ನರಕ ಎಂಬ ಬಸವವಾಣಿಯಂತೆ ಕರ್ಮಸಂಚಯದಿಂದ ಸ್ಥೂಲ ಶರೀರವು ಕಾರ್ಮಿಕಮಲದಿಂದ ಭಾದಿತವಾಗುತ್ತದೆ. ಅಜ್ಞಾನ-ಅಸತ್ಯಗಳಿಂದ ಸೂಕ್ಷ್ಮ ಶರೀರವಾದ ಮನಸ್ಸು ಭ್ರಮಿತವಾಗಿ ಮಾಯಾಮಲದಿಂದ ಆವರಿಸಲ್ಪಡುತ್ತದೆ. ದುರ್ಭಾವದಿಂದ ಕಾರಣ ಶರೀರವು ಕಲುಷಿತವಾಗಿ ಆಣವ ಮಲಕ್ಕೆ ಸಿಕ್ಕಿ ಮತ್ತೆ ಭವಕ್ಕೆ ಬರಲು ಹಾತೊರೆಯುತ್ತದೆ. ನಿತ್ಯವೂ ಸತ್ಸಂಗದಲ್ಲಿ ಬೆರೆತು, ಸದ್ಬೋಧೆ ಕೇಳಿ, ಪರಿವರ್ತನೆಯಾಗಿ ಬಾಳನ್ನು ಹಸನು ಮಾಡಿಕೊಳ್ಳಲು ಮನಸ್ಸಿಲ್ಲದವರು, ಅಂದರೆ 'ತ್ರಿವಿಧ ಮಲಕ್ಕೆ ಬಡಿದಾಡುವವರೆ ನೀವು ಬರಬೇಡಿ' ಎಂದು ಅಂಥ ದುರಾಚಾರಿ, ದುರ್ಮತಿಗಳನ್ನು ಹೊರಗಿಟ್ಟಿದ್ದಾರೆ. ಏಕೆಂದರೆ ಇಂಥ ಜನ ಅನುಭವ ಮಂಟಪದಂಥ ಪವಿತ್ರ ಸ್ಥಳದಲ್ಲು ತಮ್ಮ ದುರ್ನಡತೆಯನ್ನೆ ಪ್ರದರ್ಶಿಸಿ, ಮುಂದುವರಿಸಿ, ಪರಿಸರ ಕಲುಷಿತವಾಗಲು ಕಾರಣರಾಗುತ್ತಾರೆ.

ಮುಂದಿನ ಸರದಿ 'ನಿರುತ ಸ್ವಯಾನುಭಾವರು ಬನ್ನಿ' ಎಂದು ಗುರುವಿನ ಹಂಗಿಲ್ಲದೆ ತಮ್ಮಿಂದ ತಾವೇ ಸರಿ-ತಪ್ಪುಗಳ ಹಾದಿಯಲ್ಲಿ ಸತ್ಯಶೋಧಕರಾಗಿ ಸಾಧನೆ ಮಾಡುತ್ತಾ ಕಾಲ, ಶ್ರಮ ಮತ್ತು ಆಯುಷ್ಯವನ್ನು ವ್ಯರ್ಥಗೊಳಿಸುತ್ತಾ ಗುರಿ ಮುಟ್ಟಲು ಬಳಲುತ್ತಿರುವ ಸಾಧಕರೆ, ನೀವು ಬಂದು ಶರಣರ ಅನುಭಾವದಲ್ಲಿ ಬೆರೆತು ಜೀವಾತ್ಮ-ಪರಮಾತ್ಮರ ನಿಜಸ್ವರೂಪವನ್ನು ಅರಿತು, ಇಹ-ಪರದ ಜೀವನವನ್ನು ಸಾರ್ಥಕವಾಗಿಸಿ ಧನ್ಯರಾಗಲು ಬನ್ನಿ.

'ಪರಬ್ರಹ್ಮಸ್ವರೂಪರು ಬನ್ನಿ' ಎಂದು ಈಗಾಗಲೇ ನಿರಾಕಾರನಾದ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಂಡು ತಮ್ಮಿಂದ ತಾವೇ ಆಗಿ ಲೋಕದ ಗೊಡವೆಯಿಂದ ದೂರ ಉಳಿದ ಏಕಾಂತಪ್ರಿಯ, ಮೌನಯೋಗಿ, ಸಾಧುಸಂತರೆ ನೀವು ಬನ್ನಿ. ಸಾಧಿಸುವುದು ಇನ್ನೇನು ಇಲ್ಲವೆಂಬ ಭಾವದಿಂದ ದೂರ ಇರಬೇಡಿ. ಏಕೆಂದರೆ ಪರಮಾತ್ಮನ ನಿಜಸ್ವರೂಪ ಮತ್ತು ಅಸ್ತಿತ್ವವನ್ನು ಲೋಕಕ್ಕೆ ಸಾರುವವರ ಕೊರತೆಯಿರುವಾಗ ನೀವು ಸ್ವಪ್ರಯತ್ನದಿಂದ, ಗಳಿಸಿ, ಅನುಭವಿಸಿ, ಆನಂದಿಸಿದ ಜ್ಞಾನಾನುಭಾವಗಳನ್ನು ಈ ಜಗತ್ತು ಮತ್ತು ನಮ್ಮ ಸುತ್ತಲಿರುವ ಸಮಾಜಕ್ಕೆ ಧಾರೆಯೆರೆಯಲು, ಹಂಚಲು ಬನ್ನಿ.

'ಏಕಲಿಂಗನಿಷ್ಠಾಪರ ದೃಢವಂತರು ಬನ್ನಿ'- ಜಗದೊಡೆಯನಾದ ನಿರ್ಗುಣ, ನಿರವಯುವನಾದ ಪರಮಾತ್ಮನನ್ನು ಪೂಜಿಸಲು ಬರದೆಂದು ಜೀವ-ದೇವರ ಸಂಯೋಜನೆಯಾದ ಇಷ್ಟಲಿಂಗವನ್ನು ಸಂಶೋಧಿಸಿ ಜಗತ್ತಿಗೆ ಕೊಟ್ಟರು ಧರ್ಮಪಿತ ಬಸವಣ್ಣನವರು. ಈ ಇಷ್ಟಲಿಂಗವನ್ನು ಗುರುಮುಖೇನ ದೀಕ್ಷೆ ಪಡೆದು ಅಂಗದ ಮೇಲೆ ಧರಿಸಿದ ನಂತರ ಅನ್ಯದೈವದ ಪೂಜೆ ಭಕ್ತನಿಗೆ ನಿಷಿದ್ಧ. ಲಿಂಗಾಯತನು ಧರ್ಮಶಾಸ್ತ್ರದ

ನಿಯಮದಂತೆ ಇತರ ದೇವತೆಗಳ ಪೂಜೆ ಮಾಡಬಾರದು, ಗುಡಿಗುಂಡಾರಗಳನ್ನು ಸುತ್ತಬಾರದು, ತೀರ್ಥಕ್ಷೇತ್ರಗಳ ದರ್ಶನ ಮಾಡಬಾರದು, ಅನ್ಯ ದೇವತೆಗಳ ನೈವೇದ್ಯ ಸ್ವೀಕರಿಸಬಾರದು. ಆದ್ದರಿಂದ ಏಕಲಿಂಗನಿಷ್ಠಾಪರ ದೃಢವಂತರು ಬನ್ನಿ ಎಂದು ಭಕ್ತನ ನಿಷ್ಠೆಗೆ ಸವಾಲು ಹಾಕಿ ಆಹ್ವಾನಿಸುತ್ತಿದ್ದಾರೆ ಶರಣ ಗಬ್ಬಿದೇವಯ್ಯನವರು.

'ಸನ್ಮಾರ್ಗ ಸತ್ಕ್ರಿಯಾವಂತರು ಬನ್ನಿ'- ಎಂದು ಈಗಾಗಲೆ ಸತ್ಪಥದಲ್ಲಿರುವವರು ಅಥವ ಮುಂದೆ ಸನ್ಮಾರ್ಗದಲ್ಲಿ ಸಾಗಬೇಕೆನ್ನುವವರು ನೀವು ಬನ್ನಿ. ಏಕೆಂದರೆ ಸನ್ಮಾರ್ಗದಲ್ಲಿ ಸಾಗಲು ಅಗತ್ಯವಾದ ಮಾರ್ಗದರ್ಶನ ಮಾಡುವ ಅನೇಕ ಮಹಾನುಭಾವರು ಇಲ್ಲಿದ್ದಾರೆ. ಅಲ್ಲದೆ ಒಳ್ಳೆಯ ಕೆಲಸ ಮಾಡುತ್ತಿರುವ/ ಮಾಡಬೇಕೆನ್ನುವ ಸಂಕಲ್ಪ ಹೊತ್ತ ಸಜ್ಜನ-ಸದ್ಭಾವಿಗಳೇ ನೀವು ಬನ್ನಿ. ನಿಮ್ಮ ಸಂಕಲ್ಪ ಈಡೇರಲು ವಿಪುಲವಾದ ಸದವಕಾಶಗಳು ಇಲ್ಲಿವೆ. ಏಕೆಂದರೆ ನಿಮ್ಮಂಥ ಸಹೃದಯಿಗಳಿಂದಲೇ ಈ ಜಗತ್ತಿನಲ್ಲಿ ಸತ್ಕಾರ್ಯಗಳು ನಡೆಯುತ್ತಿವೆ. ಮಹಾಕಾರ್ಯಗಳು ಯಶಸ್ವಿಯಾಗುತ್ತಿವೆ.

ಹೀಗೆ ಒಳಗೆ ಬರಲು ಅರ್ಹರಾದವರನ್ನು ಸ್ವಾಗತಿಸುತ್ತಾ, ಅನರ್ಹರಾದವರನ್ನು ತಡೆಯುತ್ತಾ ಕಾವಲು ಜತೆಗೆ ಭದ್ರತಾಪಡೆಯ ದ್ವಿಕಾಯಕವನ್ನು ಗುರು ಬಸವಣ್ಣನವರ ಆದೇಶದಂತೆ, ನಿಷ್ಠೆಯಿಂದ, ಸಮರ್ಥವಾಗಿ ನಿಭಾಯಿಸುತ್ತಿರುವ ಉಗ್ಘಡಿಸುವ ಕಾಯಕದ ಗಬ್ಬಿದೇವಯ್ಯನವರು ಭದ್ರತಾ ಕಾಯಕದ ಅಂತರಂಗದ ಸತ್ವವನ್ನು ಮತ್ತು ಕಾವಲು ಕಾಯಕದ ಬಹಿರಂಗದ ಮೌಲ್ಯವನ್ನು ಎತ್ತಿ ಹಿಡಿದಿದ್ದಾರೆ.

****

ದೇವನಿಗೊಂದು ಪತ್ರ

ದೇವ ನಿನ್ನ ಕಾಣಲು ಮನವು ಹಂಬಲಿಸಿದೆ
ಕರುಣೆಯ ಸಾಗರನೆ ನಿನ್ನ ಪ್ರೇಮದಲ್ಲಿರಿಸು ಎನ್ನ
ನಿನ್ನ ಕರುಣೆಯ ಗುಣವೆನ್ನಲ್ಲಿ ಬೆರೆಯಲಿ
ನಿನ್ನ ಮಮತೆಯ ಶಕ್ತಿ ಎನ್ನ ಪೊರೆಯಲಿ
ನಿನ್ನ ಪ್ರೇಮದ ಶುದ್ದತೆಯು ಎನ್ನಲ್ಲಿ ಬೆಳಗಲಿ
ಉಸಿರು ಕೊಟ್ಟ ದೇವ ನೀ ಎನ್ನ ಉಸಿರಾಗಿರು
ಜಗವ ಕೊಟ್ಟ ದೇವ ನೀ ಎನ್ನ ಜಗವಾಗಿರು
ಆತ್ಮದ ಹಂಬಲ ಪೊರೆವ ನೀ ಎನ್ನ ತಾಯಾಗಿರು
ನುಡಿಯ ಕೊಟ್ಟ ದೇವ ನೀ ಎನ್ನ ಸ್ವರವಾಗಿರು
ಹೃದಯ ಕೊಟ್ಟ ದೇವ ನೀ ಎನ್ನ ಮಿಡಿತವಾಗಿರು
ಮನವ ಕೊಟ್ಟ ದೇವ ನೀ ಎನ್ನ ತುಡಿತವಾಗಿರು
ಶತ್ರುವಲ್ಲೂ ಪ್ರೇವತ್ವವ ಕಾಣ್ವ ಪ್ರೇಮತ್ವವಿರಲಿ ಎನಗೆ
ಮಿತ್ರನಲ್ಲೂ ಶಿವತ್ವವ ಕಾಣ್ವಾವ ಗುಣವಿರಲಿ ಎನಗೆ
ನಡೆ-ನುಡಿಯಲ್ಲೂ ನಿನ್ನದೇ ಶ್ರೀಮತದ ಆದರ್ಶವಿರಲಿ
ಬೇಡುವೆನು ನಿನ್ನಲ್ಲಿ ಇವೆನ್ನ ಒಡವೆಗಳಾಗಲಿ
ದೇವನಿಗಿದು ಅರ್ಪಣೆಯ ಮಮತೆಯ ಓಲೆಯಾಗಲಿ
ಕರುಣೆಯ ಮಿಡಿವ ಗುಣವನ್ನನಲ್ಲಿದ ನೆಲೆಯಾಗಲಿ

– ಶ್ರೀಕಾಂತ. ವೈ.ಬಿ, ಭ್ರದಾವತಿ

ಸತ್ತ ಕೋತಿ ಹನುಮಂತನ ಗುಡಿಗೆ ನಾಂದಿಯಾದ ಕಥೆ!

– ಪೂಜ್ಯ ಶ್ರೀ ಬಸವಪ್ರಭು ಸ್ವಾಮೀಜಿ

ನಿಜ! ಶತಶತಮಾನಗಳಿಂದ ಬೇರು ಬಿಟ್ಟಿರುವ ಹಿಂದೂ ವೈದಿಕ ಶಾಹಿಯ ಮನೋಧರ್ಮವೆ ಇದಕ್ಕೆಲ್ಲಾ ಕಾರಣ. ಅವರು ನಂಬಿಕೊಂಡು ಬಂದ ಅಂಧಾನುಕರಣೆಯೆ ಈ ಗುಡಿಗಳ ಸ್ಥಾಪನೆಯಾಗುತ್ತಿರುವುದು. ಇಂದಿನ ಆಧುನಿಕತೆಯಲ್ಲಿ ಇಂಥಹ ಮೌಢ್ಯಗಳು ಹಳ್ಳಿ, ಪಟ್ಟಣಗಳಲ್ಲಿ ಜೀವಂತವಾಗಿರುವುದು ವಿಷಾದನೀಯ. ಅದಕ್ಕಾಗಿಯೇ ಗುರು ಬಸವಣ್ಣನವರು "ಕಲ್ಲುದೈವ, ಮಣ್ಣುದೈವ, ಮರದೈವ, ಕಟ್ಟಿಗೆ ದೈವ, ಕಿಚ್ಚುದೈವ, ದೈವ ದೈವವೆಂದು ಕಾಲಿಡಲಿಂಬಿಲ್ಲ..." ಎಂದು ಬೇಸರಿಸಿಕೊಂಡಿದ್ದಾರೆ. ಮತ್ತು ಕಾಲ್ಪನಿಕ ದೇವರುಗಳನ್ನು ಸೃಷ್ಟಿಮಾಡಿಕೊಂಡು ಪೂಜಿಸುವವರಿಗೆ ವಚನಗಳ ಮೂಲಕ ಟೀಕಿಸಿದ್ದಾರೆ. ಶೂನ್ಯಪೀಠಾದೀಶರಾದ ಅಲ್ಲಮಪ್ರಭು ದೇವರು ಸಹಿತ ಒಂದು ಕಡೆ ಕಲ್ಲ ದೇವರುಗಳ ಗುಡಿ, ಅಲ್ಲಿ ಲಿಂಗ ಪ್ರತಿಷ್ಠಾಪಿಸವುದನ್ನು ಕಂಡು ತಮ್ಮ ವಚನಗಳಲ್ಲಿ ವಿಡಂಬಿಸಿದ್ದಾರೆ.

ಕಲ್ಲ ಮನೆಯ ಮಾಡಿ ಕಲ್ಲ ದೇವರ ಮಾಡಿ
ಆ ಕಲ್ಲು ಕಲ್ಲ ಮೇಲೆ ಕಟೆದರೆ ದೇವರೆತ್ತ ಹೋದರೊ?
ಲಿಂಗ ಪ್ರತಿಷ್ಠೆಯ ಮಾಡಿದವರಿಗೆ ನಾಯಕ ನರಕ ಗುಹೇಶ್ವರ.

ಈ ಜಗತ್ತಿನಲ್ಲಿ ಮುಗ್ದ ಭಾವುಕ ಮೂಢಭಕ್ತರು ದೇವರಿಗೆಂದು ಕಲ್ಲಿನ ದೇವಾಲಯ ಮಾಡುತ್ತಾರೆ. ಅದರಲ್ಲೊಂದು ಕಲ್ಲಿನಿಂದಲೇ ಕಡೆದ ಮೂರ್ತಿಯನ್ನು ದೇವರಾಗಿ ಮಾಡುತ್ತಾರೆ. ದೇವರು ನಿರಾಕಾರವಾದವನು, ತನ್ನಲ್ಲಿ ಜಗವ ಅಳವಡಿಸಿಕೊಂಡವನು ಅಂಥಹ ಮಹಾಘನ ಲಿಂಗದೇವನನ್ನು ಒಂದು ಚಿಕ್ಕ ಆಕೃತಿಯ ಪರಿಮಿತಿಯ ದೇವ್ಹಾಲಯದಲ್ಲಿರಿಸಲು ಮತ್ತು ಯಾವುದೇ ಒಂದು ರೂಪಕೊಡಲು ಸಾಧ್ಯವೇ? ಅವನು ನಿರಾಕಾರ ನಿಧಾಮಯ ಅವನು ಕಲ್ಲು, ಕಟ್ಟಿಗೆ, ಕಂಚು ಮುಂತಾದ ಮೂರ್ತಿಯಾಗಿರಲು ಸಾಧ್ಯವೆ? ಹಾಸ್ಯಾಸ್ಪದವಾಗಿ ಒಂದು ವಿಚಾರವನ್ನು ಮಾಡುವುದಾದರೆ, ಒಂದಾನೊಂದು ಕಾಲದಲ್ಲಿ ಮುಂದೆ ದೇವಾಲಯವು ಜೀರ್ಣಗೊಂಡು ಅದೇ ಮೂರ್ತಿಯ ಮೇಲೆ ಬಿದ್ದರೆ, ಆ ದೇವನ ಗತಿ ಏನು? ಇದ್ಯಾವುದನ್ನು ವಿಚಾರಿಸದ ಮುಗ್ದ ಮಾನವರು ನಿರ್ಮಿಸುವ ದೇವಾಲಯ ಅರ್ಥಹೀನವೆನಿಸುತ್ತದೆ. ಅದರಲ್ಲಿ ಪ್ರತಿಷ್ಠಾಪಿಸುವ ಇತಿಹಾಸವೇ ಇಲ್ಲದ ಕಾಲ್ಪನಿಕ ಮೂರ್ತಿಗಳಾಗಲಿ, ಸ್ಥಾವರ ಲಿಂಗವಾಗಲಿ ಅರ್ಥವಿಲ್ಲದ್ದು, ಅದರಿಂದ ಆ ಭಾವುಕ ಭಕ್ತರಿಗೆ ದುಃಖವೆಂಬ ನರಕವೇ ಗತಿಯು ಎನ್ನುವುದಲ್ಲದೆ ಮುಂದುವರೆದು.

ಪೃಥ್ವಿಗೆ ಹುಟ್ಟಿದ ಶಿಲೆಯ ತಂದು ಕುಟಿಕನೋರ್ವ ಮೂರ್ತಿ ಮಾಡಿದ
ಅದಕ್ಕೆ ಹಾರುವನೋರ್ವ ಪ್ರಾಣಪ್ರತಿಷ್ಠಾಪನೆ ಮಾಡಿದ
ಈ ಮೂವರಿಗೆ ಹುಟ್ಟಿದ ದೇವರು ದೇವರೆ, ಗುಹೇಶ್ವರನ ಸಾಕ್ಷಿಯಾಗಿ

ಆ ದೇವರು ಹಾದರ ಕಾಣಾ ಸಿದ್ದರಾಮಯ್ಯ

ಈ ವಚನದಲ್ಲಿ ದೇವರುಗಳನ್ನು ಮಾನವ ಸೃಷ್ಟಿಸುವನೆಂದ ಮೇಲೆ ಮಾನನಿಗೆ ಹುಟ್ಟಿದ ದೇವರು ದೇವರೆ? ದೇವರೆನಿಸಿಕೊಳ್ಳವ ಶಿಲೆ ಮೊದಲ ಭೂಮಿಗೆ ಹುಟ್ಟಿತ್ತು, ಎರಡನೆಯದಾಗಿ ಆ ಶಿಲೆಗೆ ರೂಪಕೊಟ್ಟಾಗ ಶಿಲ್ಪಕಾರನಿಗೆ ಹುಟ್ಟಿದಾಯಿತು, ಮೂರನೆಯ ದಾಗಿ ಆ ಮೂರ್ತಿಗೆ ಪ್ರಾಣ ಪ್ರತಿಷ್ಠಾಪನೆ ಮಾಡುತ್ತೆನೆನ್ನುವಲ್ಲಿ ಹಾರುವನಿಗೆ ಹುಟ್ಟಿ ದಂತಾಯಿತು ಈ ಮೂವರಿಗೆ ಹುಟ್ಟಿದ ದೇವರು ಹಾದರವಲ್ಲವೆ.(ವೇಶ್ಯೆಯಲ್ಲವೆ ಇಂತಹ ಕಲ್ಲು ದೇವರನ್ನು ಪೂಜೆ ಮಾಡಿದ ಭಕ್ತನೆನಾಗಬೇಕು! ಅವನು ಹಾದರವಾದಂತಲ್ಲವೆ? ಎಂದು ವ್ಯಂಗವಾಡಿದ್ದಲ್ಲದೆ.

ದೇಹವೆ ದೇಗುಲವಾಗಿರಲು ಬೇರೆ ಮತ್ತೆ ದೇವಾಲಯವೇಕಯ್ಯಾ!
ಪ್ರಾಣವೆ ಲಿಂಗವಾಗಿರಲು, ಬೇರೆ ಮತ್ತೆ ಲಿಂಗವೇಕಯ್ಯಾ?
ಹೇಳಲಿಲ್ಲ ಕೇಳಲಿಲ್ಲ ಗುಹೇಶ್ವರಾ ನೀನು ಕಲ್ಲಾದರೆ ನಾನೆನಪ್ಪೆನಯ್ಯಾ;

ಎನ್ನುವಲ್ಲಿ ಅಲ್ಲಮ ಪ್ರಭುದೇವರು ವಾಸ್ತವಿಕ ಚಿತ್ರಣವನ್ನು ಈ ವಚನದ ಮೂಲಕ ಪ್ರಾಸ್ತಾಪಿಸಿದ್ದಾರೆ. ವಿಶ್ವವನ್ನೊಳಗೊಂಡು ಮಾನವನ ಅಂತರಂಗದಲ್ಲಡಗಿರುವ ದೇವನಿಗೆ ಆ ಮಾನವ ದೇಹವೆ ದೇವಾಲಯವಾಗಬೇಕು. ಮತ್ತೊಂದು ಬಾಹ್ಯ ದೇವಾಲಯದ ಅಗತ್ಯವಿಲ್ಲ. ಭೌತಿಕ ಭೋಗವಸ್ತುಗಳು ಪ್ರಾಣವಾಗಿರದೆ, ಲಿಂಗವೆ ಪ್ರಾಣವಾಗಿರುವ ಲಿಂಗ ಸಾಧಕರಿಗೆ ಮತ್ತೆ ಬೇರೆ ಲಿಂಗ ಪ್ರತಿಷ್ಠಾಪಿಸುವ ಅಗತ್ಯವಿಲ್ಲ. ಆದರೆ ಈ ಜಗತ್ತಿನಲ್ಲಿ ಇಂತಿ ನಿಜ ತತ್ವಜ್ಞಾನವನು ಹೇಳುವವರು, ಕೇಳುವವರು ಯಾರು ಇಲ್ಲದಂತಾಗಿದೆ; ದೇವನೆ ಜಡಕಲ್ಲಾದ ಬಳಿಕ ಇನ್ನು ಆ ದೇವನ ನಂಬಿದ ಭಕ್ತನೇನಾಗಬೇಕು? ಹಾಗಾದರೆ ಅವನಗತಿ ಏನು! ಕಲ್ಲಿನ ದೇವರೆಂದಾದರು ಸಂಕಷ್ಟ ಪಾರು ಮಾಡುವುದೆ? ಹೀಗೆ ದೇವಾಲಯ ಕಟ್ಟಿ ಮೂರ್ತಿ ಪ್ರತಿಷ್ಠಾಪಿಸುವುದನ್ನು ಇಷ್ಟೊಂದು ಸ್ಪಷ್ಟವಾಗಿ ಖಂಡಿಸಿದ್ದಲ್ಲದೆ. 12ನೇ ಶತಮಾನದಲ್ಲಿ ಗುರು ಬಸವಣ್ಣನವರಾದಿಯಾಗಿ ಎಲ್ಲಾ ಶರಣರು ಸರಿಯಾದ ದೇವರ ಕಲ್ಪನೆಯನ್ನು ವೈಜ್ಞಾನಿಕವಾಗಿ, ವೈಚಾರಿಕವಾಗಿ ವಚನಗಳಲ್ಲಿ ಬೋದಿಸಿ, ಪರ್ಯಾಯವಾಗಿ ನಿರಾಕಾರ ನಿರ್ಗುಣನಾದ ಲಿಂಗದೇವನ ಕುರುಹು ಇಷ್ಟಲಿಂಗ. ಇದು ಯಾವುದೇ ವ್ಯಕ್ತಿಯ, ಪ್ರಾಣಿಯ, ಕುರುಹುವಾಗಿರದೆ ಅರಿವಿನ ಕುರುಹು ಎಂಬುದನ್ನು ಮನದಟ್ಟು ಮಾಡಿದರು. ಅದನ್ನು ಧರ್ಮಲಾಂಛನವನ್ನಾಗಿ ಪ್ರತಿಯೊಬ್ಬರಿಗೆ ಆತ್ಮಜ್ಞಾನದ ಅರಿವನ್ನ ಮತ್ತು ತನನಂತ ರಂಗದಲ್ಲಿಯೇ ದೇವನ ಕಾಣುವ ಬಗೆಯನ್ನ ಲಿಂಗಾಂಗ ಯೋಗದ ಮೂಲಕ ತೋರಿಸಿ ಕೊಟ್ಟರು ಆದರೆ ಇಂದು ತಿಳಿದವರು, ತಿಳಿಯದವರು "ಬಳ್ಳಿ ಕುರುಡರು ಸೇರಿ ಹಳ್ಳವನು ಬಿದ್ದಂತೆ" ಮೂಢನಂಬಿಕೆಯ ಕೂಪದಲ್ಲಿ ಬಿದ್ದು, ಮೂಢನಂಬಿಕೆಯನ್ನು ಜೀವಂತವಿಟ್ಟು ಜಾಗತಿಕ ಮಟ್ಟದಲ್ಲಿ ಭಾರತವನ್ನು ಅಂದಶ್ರದ್ದೆಯತ್ತ ಕೊಂಡೊಯ್ಯುತ್ತಿರುವುದು ಶೋಚನೀಯ.

ವಚನ ಸಾಹಿತ್ಯದ ಬಹುಮುಖಿ ಚಿಂತನೆ-1

-ಸಚ್ಚಿದಾನಂದ ಚಟ್ನಳಿ

ವಚನ ಸಾಹಿತ್ಯವನ್ನು ಜಗತ್ತಿನ ಇತರ ಸಾಹಿತ್ಯದೊಂದಿಗೆ ಹೋಲಿಸಿ ನೋಡಿದರೆ ವಚನ ಸಾಹಿತ್ಯ ತನ್ನದೇ ಆದ ಹಿರಿಮೆ ಗರಿಮೆಗಳನ್ನು ಹೊಂದಿದೆ. ಜಗತ್ತಿನ ಇತರೆ ಧರ್ಮಗಳ ಸಾಹಿತ್ಯದೊಂದಿಗೆ ಹೋಲಿಸಿದಾಗ ವಚನ ಸಾಹಿತ್ಯದಷ್ಟು ವ್ಯಾಪಕವಾದ ಮತ್ತು ಪರಿಪೂರ್ಣವಾದ ಸಾಹಿತ್ಯ ಮತ್ತೊಂದಿಲ್ಲ.

ಎಮ್ಮ ವಚನದೊಂದು ಪಾರಾಯಣಕ್ಕೆ
ವ್ಯಾಸನದೊಂದು ಪುರಾಣ ಸಮಬಾರದಯ್ಯ
ಎಮ್ಮ ವಚನದ ನೂರೆಂಟರಧ್ಯಯನಕ್ಕೆ
ಶತರುದ್ರೀಯ ಯಾಗ ಸಮಬಾರದಯ್ಯ
ಎಮ್ಮ ವಚನದ ಸಾಸಿರ ಪಾರಾಯಣಕ್ಕೆ
ಗಾಯತ್ರಿ ಲಕ್ಷ ಜಪ ಸಮಬಾರದಯ್ಯ
ಕಪಿಲಸಿದ್ಧ ಮಲ್ಲಿಕಾರ್ಜುನ.

ಗುರು ಸಿದ್ಧರಾಮೇಶ್ವರರ ಮೇಲಿನ ವಚನವನ್ನು ಗಮನಿಸಿದಾಗ ವಚನಗಳ ಮೌಲ್ಯದ ಅರಿವಾಗುತ್ತದೆ. ತತ್ವಕ್ಕೆ ತತ್ವ ಸಾಹಿತ್ಯಕ್ಕೆ ಸಾಹಿತ್ಯವಾಗಿರುವ ವಚನ ವಾಙ್ಮಯವು ಏಕಕಾಲಕ್ಕೆ ಆತ್ಮ ಕಲ್ಯಾಣವನ್ನು ಮತ್ತು ಸಮಾಜ ಕಲ್ಯಾಣವನ್ನು ಪ್ರತಿಪಾದಿಸುತ್ತದೆ.

ವಚನ ಸಾಹಿತ್ಯದಲ್ಲಿ ಧರ್ಮವಿದೆ, ಭಕ್ತಿಯೋಗವಿದೆ, ಜ್ಞಾನ ಮಾರ್ಗವಿದೆ, ಆಧ್ಯಾತ್ಮಿಕ ಪಥವಿದೆ, ಹರನೆಡೆಯಿಂದ ಪರಮನೆಡೆಗೆ ಸಾಗಿದ ಪರಿವರ್ತನೆಯ ಘಟ್ಟವಿದೆ. ಕಾಲಜ್ಞಾನದ ಅಪಾರವಾದ ಜ್ಞಾನ ಭಂಡಾವಿದೆ. ಸಾಮಾಜಿಕ ಸಮಾನತೆಯಿದೆ, ಧಾರ್ಮಿಕ ಸ್ವಾತಂತ್ರ್ಯವಿದೆ, ರಾಜಕೀಯ ಸಿದ್ಧಾಂತವಿದೆ, ಆರ್ಥಿಕ ಪ್ರಗತಿಯ ಸೂತ್ರವಿದೆ, ಕಾಯಕ ದಾಸೋಹವಿದೆ, ಅರ್ಚನೆ-ಅರ್ಪಣೆ-ಅನುಭಾವಗಳ ತ್ರಿವೇಣಿ ಸಂಗಮವಿದೆ. ಮಾನವ ಹಕ್ಕುಗಳಿವೆ.

ಮಾನವ ಜೀವನಕ್ಕೆ, ವ್ಯಕ್ತಿತ್ವ ವಿಕಸನಕ್ಕೆ ಬೇಕಾದ ಎಲ್ಲಾ ಅಂಶಗಳು ವಚನ ಸಾಹಿತ್ಯದಲ್ಲಿ ಅಡಕವಾಗಿವೆ. ಅಂಥ ಒಂದೊಂದು ವಿಚಾರಗಳನ್ನು ನೋಡೋಣ.

ಆಂಗ್ಲಭಾಷೆಯಲ್ಲಿ ಒಂದು ಗಾದೆಯಿದೆ "*Rome was not built in a day*"(ರೋಮ್ ವಾಸ್ ನಾಟ್ ಬಿಲ್ಟ ಇನ್ ಅ ಡೇ) ರೋಮ್ ನಗರ ಅತ್ಯಂತ ಪ್ರಾಚೀನವಾದ ಮತ್ತು ಅತ್ಯಂತ ಸುಂದರವಾದ ನಗರ. ಅದುಸುಂದರವಾದ ಕಟ್ಟಡ, ಶಿಲ್ಪಕಲೆ, ವಾಸ್ತುಶಿಲ್ಪಕ್ಕೆ ಹೆಸರು ವಾಸಿಯಾದ ನಗರ. ಅದೊಂದು ಸುವ್ಯವಸ್ಥಿತವಾದ ಮತ್ತು ಪ್ರಾಚೀನ ನಾಗರಿಕತೆಗೆ ಹೆಸರುವಾಸಿಯಾದ ನಗರ. ಇಂಥ ನಗರ ಒಂದೇ ದಿನದಲ್ಲಿ ಕಟ್ಟಿರುವುದಲ್ಲ. ಸಾವಿರಾರು ಜನರ ನೂರಾರು ವರ್ಷಗಳ ಪರಿಶ್ರಮ ಅಂಥ ನಗರ ನಿರ್ಮಾಣದ ಹಿಂದೆ ಇದೆ. ಒಟ್ಟಾರೆ ಈ ಗಾದೆಯ ಅರ್ಥ ಮಹತ್ವವಾದುದನ್ನು ಉನ್ನತವಾದುದನ್ನು ಒಂದೇ ದಿನದಲ್ಲಿ ಸಾಧಿಸಲಿಕ್ಕೆ ಸಾಧ್ಯವಿಲ್ಲ. ಪ್ರತಿಯೊಂದು ಸಾಧನೆಯ ಹಿಂದೆ ಕಠಿಣವಾದ ಪರಿಶ್ರಮವಿರಲೇಬೇಕು.

ಈ ವಿಚಾರವನ್ನು ಗಮನಿಸಿದಾಗ ವಚನ ಸಾಹಿತ್ಯ ನಮಗೆ ಅತ್ಯಂತ ಮನ ಮುಟ್ಟುವ ರೀತಿಯಲ್ಲಿ ಮಾರ್ಗದರ್ಶನ ಮಾಡುತ್ತದೆ.

ಭಕ್ತನೆನಿಸುವೆನಯ್ಯಾ ಮೆಲ್ಲಮೆಲ್ಲನೆ
ಯುಕ್ತನೆನಿಸುವೆನಯ್ಯಾ ಮೆಲ್ಲ ಮೆಲ್ಲನೆ
ಸಾರಿ ಶರಣನೆನೆಸುವೆನಯ್ಯಾ ಮೆಲ್ಲಮೆಲ್ಲನೆ.
ಎಡಹುಗುಳಿಗಳ ದಾಂಟಿ ಬರಬರ ಲಿಂಗೈಕ್ಯನೆನಿಸುವೆನಯ್ಯ
ಲಿಂಗದೇವಾ ನಿಮ್ಮಿಂದಧಿಕನೆನೆಸುವೆನಯ್ಯಾ

ಮೆಲ್ಲಮೆಲ್ಲನೆ ಭಕ್ತನೆನಿಸಿಕೊಂಬೆ
ಮೆಲ್ಲಮೆಲ್ಲನೆ ಮಾಹೇಶ್ವರನೆನಿಸಿಕೊಂಬೆ
ಮೆಲ್ಲಮೆಲ್ಲನೆ ಪ್ರಸಾದಿಯೆನಿಸಿಕೊಂಬೆ
ಮೆಲ್ಲಮೆಲ್ಲನೆ ಪ್ರಾಣಲಿಂಗಿಯೆನಿಸಿಕೊಂಬೆ
ಮೆಲ್ಲಮೆಲ್ಲನೆ ಶರಣನೆನಿಸಿಕೊಂಬೆ
ಮೆಲ್ಲಮೆಲ್ಲನೆ ಐಕ್ಯನೆನಿಸಿಕೊಂಬೆ
ಮೆಲ್ಲಮೆಲ್ಲನೆ ಷಟಸ್ಥಲವ ಮೀರಿ
ನಿರವಯವ ಸ್ಥಲವನ್ನೈದುವೆನಯ್ಯಾ ಲಿಂಗದೇವಾ.

ಗುರು ಬಸವಣ್ಣನವರ ಮೇಲಿನ ವಚನಗಳು ಎಲ್ಲಾ ರಂಗಗಳಲ್ಲಿರುವ ವ್ಯಕ್ತಿಗಳಿಗೆ ಮಾರ್ಗದರ್ಶನ ಮಾಡುತ್ತವೆ. ಪ್ರತಿಯೊಂದು ರಂಗದಲ್ಲಿಯ ಪ್ರತಿಯೊಬ್ಬರ ಸಾಧನೆ ಹಂತ ಹಂತವಾಗಿ ಸಾಗಿ ಮೇಲೇರಬೇಕು.

ವಿದ್ಯಾರ್ಥಿಗಳು ನಿರಂತರ ಅಧ್ಯಯನವನ್ನು ಬಾಲ್ಯದಿಂದಲೇ ರೂಡಿಸಿಕೊಳ್ಳಬೇಕು. ಒಂದು ಶೈಕ್ಷಣಿಕ ವರ್ಷವನ್ನು ಪರಿಗಣಿಸಿದಾಗ ಆರಂಭದಿಂದಲೇ ಅಭ್ಯಾಸ ಮಾಡಬೇಕು. ಕೆಲವರು ಕೇವಲ ಪರೀಕ್ಷೆ ಹತ್ತಿರ ಬಂದಾಗ ಮಾತ್ರ ಓದುತ್ತದೆ. ಇದರಿಂದ ಪರೀಕ್ಷೆ ಉತ್ತೀರ್ಣರಾಗಲಿಕ್ಕೆ ತಾತ್ಕಾಲಿಕ ಜ್ಞಾನ ಮಾತ್ರ ದೊರಕುತ್ತದೆ. ನಿರಂತರ ಅಧ್ಯಯನದಿಂದ ಮಾತ್ರ ಸದೃಢವಾದ ಜ್ಞಾನ ಲಭಿಸಲಿಕ್ಕೆ ಸಾಧ್ಯವಿದೆ.

ಧಾರ್ಮಿಕ/ ಆಧ್ಯಾತ್ಮಿಕ ಪಥದಲ್ಲಿರುವವರು ತಮ್ಮ ಸಾಧನೆಯನ್ನು ಹಂತ ಹಂತವಾಗಿ ಮಾಡಬೇಕು ಯಾರೂ ಕೂಡ ಒಂದೇ ದಿನ ಅಥವಾ ಕೆಲವು ದಿನಗಳಲ್ಲಿ ಷಟಸ್ಥಲಗಳೆಲ್ಲವನ್ನೂ ಸಾಧಿಸಲಿಕ್ಕೆ ಅಳವಡಿಸಿಕೊಳ್ಳಲಿಕ್ಕೆ ಸಾಧಿಸಲಿಕ್ಕೆ ಸಾಧ್ಯವಿಲ್ಲ. ಕೆಲವರು ಒಂದೇ ದಿನದಲ್ಲಿ ಕುಂಡಲಿನ ಜಾಗ್ರತಿ ಮಾಡಿಸುತ್ತೇವೆ, ಸಂಖ್ಯಾಶಾಸ್ತ್ರ ಕಲಿಸುತ್ತೇವೆ ಎಂದು ಅನೇಕರಿಗೆ ಮೋಸ ಮಾಡಿರುವುದನ್ನು ಮಾಧ್ಯಮಗಳಲ್ಲಿ ನೋಡಿದ್ದೇವೆ. ಕುಂಡಲಿನಿ ಜಾಗೃತಿಯಂಥ ಸಾಧನೆ ಒಂದೇ ದಿನ ಅಥವಾ ಕೆಲವೇ ವರ್ಷಗಳಲ್ಲಿ ಸಾಧಿಸುತ್ತೇನೆ/ ಕಲಿಸುತ್ತೇನೆ ಎನ್ನುವುದು ಮೂರ್ಖತನದ ಪರಮಾವಧಿ. ಅಧ್ಯಾತ್ಮಿಕ ಪಥಕ್ಕೆ ಬರುವವರೂ ಕೂಡ ಹಂತ ಹಂತವಾಗಿ ಮೇಲೆರುವ ಮನೋಭಾವನೆಯನ್ನು ಹೊಂದಿರಬೇಕೆ ಹೊರತು ಒಂದೇ ತತಕ್ಷಣವೇ ಜಗದ್ಗುರುವಾಗಬೇಕು ಎನ್ನುವ ಮನೋಭಾವನೆ ಬರಬಾರದು.

ಆಡು ಭಾಷೆಯ ಸೊಗಡಿನಲ್ಲಿ ಮೂಡಿಬಂದ ಅನುಭವ

- ಮಹಾದೇವ ಗುಡೇರ್

"ಮರದೊಳಗಣ ಪತ್ರೆ ಫಲಂಗಗಳು । ಮರಕಾಲವಶದಲ್ಲಿ ತೋರುವಂತೆ
ಹರನೊಳಗಣ ಪ್ರಕೃತಿ ಸ್ವಭಾವಂಗಳು । ಹರಭಾವದಿಚ್ಛೆಗೆ ತೋರುವವು.
ಲೀಲೆಯಾದಡೆ ಉಮಾಪತಿ । ಲೀಲೆ ತಪ್ಪದೆಡೆ ಸ್ವಯಂಭ ಗುಹೇಶ್ವರಾ"

ಸೃಷ್ಠಿಯ ಈ ಸೂಕ್ಷ್ಮ ತತ್ವವನ್ನು ನಿರೂಪಿಸುವ ಅಲ್ಲಮರ ವಚನವು, ಫಲ-ಪುಷ್ಪಗಳಿಂದ ಕೂಡಿದ ಮರದ ನಿದರ್ಶನ ಸರಳ ರೂಪದಲ್ಲಿ ಕಂಡರೂ ಅದರಲ್ಲಿ ಅಂತರ್ಗತವಾಗಿರುವ ತಾತ್ಪರ್ಯ ಸೃಷ್ಟಿಯ ದೊಡ್ಡ ನಿಗೂಢತೆ ಅಡಗಿದೆ. ಮರದಿಂದ ಮೂಡಿಬರುವ ಫಲ ಪುಷ್ಪಗಳು ಮರದಿಂದ ಭಿನ್ನವಾದವುಗಳಲ್ಲ. ಏಕೆಂದರೆ ಅವು ಆ ಮರದ ಎಲ್ಲ ಸತ್ವ ಗುಣಧರ್ಮವನ್ನು ಹೊತ್ತುಕೊಂಡು ಮೂಡಿ ಬಂದಿರುತ್ತವೆ. ಶಿವನ ಅಂತರ್ಗತ ಶಕ್ತಿಯ ಅಭಿವ್ಯಕ್ತಯಾದ ಜೀವ ಜಡಯುಕ್ತವಾದ ಈ ವಿಶ್ವವು ಪರಶಿವನ ಅವಿಚ್ಛಿನ್ನ ಶಕ್ತಿಯೇ ಹೊರತು ಮಾಯೆಯಲ್ಲ. ವಿಶ್ವವೂ ಪರಶಿವನ ಅನುವರ್ತಿತ ರೂಪವಾಗಿದ್ದು ಅವನು ಲೀಲೆಯಲ್ಲಿ ತೊಡಗಿದಾಗ ಉಮಾಪತಿಯೆನಿಸಿ ಲೀಲೆ ತಪ್ಪಿದಾಗ ಸ್ವಯಂಭುವಾಗಿಯೇ ಉಳಿಯುತ್ತಾನೆ ಎಂಬುದೇ ಶಿವ ಶರಣರ ಅದ್ವೈತ ಅಥವಾ ಶಕ್ತಿ ವಿಶಿಷ್ಟಾದ್ವೈತವಗಿದೆ. ಆದ್ದರಿಂದಲೇ ಶರಣರು ಈ ಮೃತ್ಯುಲೋಕವನ್ನು ಕರ್ತಾರನ ಕಮ್ಮಟವೆಂದು ಕರೆದು ಇಲ್ಲಿ ಸಲ್ಲುವವರು ಅಲ್ಲಿಯು ಸಲ್ಲುತ್ತಾರೆ ಎಂದು ಪ್ರತಿಪಾದಿಸಿದರು.

ಶರಣ ವಚನಗಳು ಕೇವಲ ಬುದ್ಧಿಯಿಂದ, ಭಾವಾವೇಶದಿಂದ ರಚನೆಗೊಂಡವುಗಳು ಅಲ್ಲ. ಎರಡೂ ಸೇರಿ ಅವರ ಅಂತರಂಗದ ಕುಲುಮೆಯಲ್ಲಿ ಪಾಕಗೊಂಡು ಅನುಭಾವದಿಂದ ಹೊರಹೊಮ್ಮಿದವುಗಳಾಗಿವೆ. ಕೇವಲ ಶುಷ್ಕವಾದ ಮಾತುಗಳಾಗದೇ ವಿಚಾರ ಪ್ರಖರತೆ ಸತ್ಯ ನಿಷ್ಠೂರತೆ, ಅನುಭವ ಗಮ್ಯತೆ, ಅರಿವಿನ ಅನಂತತೆ, ಕಾವ್ಯದ ಕಮನೀಯತೆ ಇವು ವಚನ ಸಾಹಿತ್ಯದ ವೈಶಿಷ್ಟ್ಯತೆಯಾಗಿದೆ. ಸಾಧಾರಣ ಓದುಗರ ದೃಷ್ಟಿಯಲ್ಲಿ ಇವು ಸರಳವಾಗಿ ಕಂಡರು ತಾತ್ವಿಕ ದೃಷ್ಟಿಯಿಂದ ತುಂಬಾ ಮಹತ್ವ ಪೂರ್ಣವಾಗಿದ್ದು ಬಹು ಕ್ಲಿಷ್ಟಕರವೂ ಎಂದೆನಿಸುತ್ತವೆ. ವಿಶ್ವಕ್ಕೆ ಕಾರಣವಾದ ಮೂಲ ತತ್ವವು ಒಂದೇ ಇದ್ದು ಅದು ಈ ವಿಶ್ವದಲ್ಲಿ ಕಾಣುವ ಚೇತನ-ಅಚೇತನ ಅಥವಾ ಜೀವ-ಅಜೀವಯುಕ್ತವಾದ ಎಲ್ಲ ವಸ್ತು ವೈವಿಧ್ಯತೆಗೂ ಕಾರಣವಾಗಿದೆ. ಮೂಲ ಸತ್ಯವನ್ನು ಕೇವಲ ಚೇತನವೆಂದು ಕರೆದರೆ ಶುದ್ಧಾದ್ವೇತ್ವದಲ್ಲಿ ನಿರೂಪಿಸುವಂತೆ ಸಚ್ಚಿದಾನಂದ ನಿತ್ಯ ಸ್ವರೂಪಿಯಾದ ಬ್ರಹ್ಮನು ನಿರ್ಗುಣನಾಗಿದ್ದು. ಮಾಯೆಯ ನೆರವಿನಿಂದ ಜೀವ-ಜಡಯುಕ್ತವಾದ ವಿಶ್ವವನ್ನು ವಿವರಿಸಬೇಕಾಗುತ್ತದೆ. ಇಲ್ಲವೆ ಮೂಲ ಸತ್ಯವನ್ನು ಕೇವಲ ಜಡವೆಂದು ತಿಳಿದು ಚೇತನಾ ಚೇತಾತ್ಮಕನಾದ ಈ ವಿಶ್ವವನ್ನು ವಿವರಿಸಲು ಚಾರ್ವಾಕರೆ ಮೊದಲಾದ ಭೌತಿಕವಾದಿಗಳ ಹಾದಿಯನ್ನು ತುಳಿದು ಚೇತನವೆಂಬುದು ಭೌತಿಕ ವಸ್ತುಗಳ ಒಂದು ಪರಿಣಾಮವೆಂದು ನಿರ್ಣಯಕ್ಕೆ ಬರಬೇಕಾಗುತ್ತದೆ. ಇವೆರಡಕ್ಕೂ ಎಡೆಗೊಡದೇ

ಈ ವಿಶ್ವದ ವಿಕಾಸಕ್ಕೆ ಕಾರಣವಾದ ಮೂಲ ತತ್ವಗಳು ಕೇವಲ ಚೇನವೂ ಅಲ್ಲ ಅಚೇತನವೂ ಅಲ್ಲ, ಇದು ಅಚೇತನವನ್ನು ಅಂತರ್ಗತಗೊಳಿಸಿಕೊಳ್ಳಬಲ್ಲ ಚೇತನ, ಅಥವಾ ಶಕ್ತಿಯನ್ನು ಅಂತರ್ಗತಗೊಳಿಸಿಕೊಂಡು ಶಿವ ಇಲ್ಲವೆ ಶಕ್ತಿ ವಿಶಿಷ್ಟ ಶಿವ. ಆದ್ದರಿಂದಲೇ ಇದು ಶಕ್ತಿ ವಿಶಿಷ್ಟಾದ್ವೈತವಾಗಿ, ಚೇತನ ಅಚೇನವೆಂಬ ಮಾನವ ಪ್ರಜ್ಞೆಗೆ ಸಹಜವಾದ ದ್ವಂದ್ವತೆಯನ್ನು ಮೀರಿ ನಿಂತಿರುವುದರಿಂದ ಶಿವಶರಣರಲ್ಲಿ ಶೂನ್ಯ ಎಂಬ ಪರಿಕಲ್ಪೆಗೆ ಇದು ಎಡೆ ಮಾಡಿ ಕೊಟ್ಟಿದೆ.

ಪ್ರಾಚೀನ ಮತ್ತು ಸಮಕಾಲೀನ ಜಗತ್ತಿನಲ್ಲಿ ಜೀವಂತವಿರುವ ವಿವಿಧ ಧರ್ಮಗಳಲ್ಲಿ ಅನೇಕ ಜನ ಮಹಾನುಭಾವರು ಆಗಿ ಹೋಗಿದ್ದಾರೆ. ಈ ಎಲ್ಲ ಅನುಭಾವಿಗಳ ಸಾಧನೆ ಮತ್ತು ಸಿದ್ದಿಯ ಸ್ವರೂಪದಲ್ಲಿ ಕಾಣಬಹುದಾದ ಸಮಾನ ತತ್ವಗಳನ್ನು ಗುರುತಿಸಲು, ವೈಚಾರಿಕ, ವೈಜ್ಞಾನಿಕ ಮತ್ತು ದಾರ್ಶನಿಕ ಪ್ರಯತ್ನಗಳು ಬೆಳೆಯುತ್ತಲಿವೆ. ಬೇರೆ-ಬೇರೆ ಅನುಭಾವಿಗಳಿಂದ ಬೆಳೆದ ಧರ್ಮಗಳ ಸಂಸ್ಕೃತಿ, ಭಾಷೆ, ಆಹಾರ, ವಿಹಾರ,ರೀತಿ ನೀತಿಗಳು ಭಿನ್ನವಿದ್ದರೂ ಅವರಿಗೆ ತೋರಿದ ದಿವ್ಯಾನುಭವದ ಸ್ವರೂಪ ಮತ್ತು ಅವರು ಅನುಸರಿಸಿದ ಸಾಧನಾ ಮಾರ್ಗ ಇವುಗಳಲ್ಲಿ ಬಹುಮಟ್ಟಿಗೆ ಏಕತೆಯನ್ನು ಕಾಣುತ್ತೇವೆ. ಭಗವಧಾನುಭವದ ಆಕರ್ಷಣೆಗೆ ಒಳಗಾದ ಸಾಧಕರು ನೈತಿಕ ಪರಿಶುದ್ಧತೆಯನ್ನು ಗಳಿಸುವದರ ಜೊತೆಗೆ ಲೌಕಿಕ ವ್ಯಾಮೋಹದಿಂದ ಸಹಜವಾಗಿಯೇ ವಿಮುಕ್ತರಾಗುತ್ತಾರೆ. ಲೌಕಿಕ ವ್ಯಾಮೋಹವನ್ನು ಹೊರದೂಡಿ ಅವುಗಳಿಂದ ಮುಕ್ತವಾಗುವ ಪ್ರಯತ್ನವನ್ನು ಅನುಭಾವ ಸಾಹಿತ್ಯದಲ್ಲಿ ವಿವೇಚನಾ ಮಾರ್ಗವೆಂದು ಕರೆಯುತ್ತಾರೆ. ಅಲೌಕಿಕಾನುಭವದ ದಾಹ ಹೆಚ್ಚಾದಂತೆಲ್ಲ ಅವರ ಇಂದ್ರಿಯ ವ್ಯಾಮೋಹಗಳು ಕಡಿಮೆಯಾಗುತ್ತ ನಿವೃತ್ತಿಪರವಾಗಿರುತ್ತಾರೆ. ಆದರೆ ಪರಮಾತ್ಮನ ಪೂರ್ಣ ದರ್ಶನದ ಪರಿಕಲ್ಪನೆ ದೊರೆಯುವ ಮುನ್ನವೇ ಅನೇಕ ಸಾಧಕರು ಒಂದು ರೀತಿಯ ಅನಿಶ್ಚಿತೆ ಸಂದಿಗ್ದತೆಯ ಹಂತವನ್ನು ಬಂದು ಮುಟ್ಟುತ್ತಾರೆ. ತಮ್ಮ ಸಾಧನೆಯಲ್ಲಿ ಅವರು ಇಹದಿಂದ ದೂರವಾದರೂ ಪರಕ್ಕೆ ಸಲ್ಲದೇ ಒಂದು ರೀತಿಯ ಅತೃಪ್ತಿಯನ್ನು ಅನುಭವಿಸುತ್ತಾರೆ. ಅತ್ಯಂತ ಅಸಹಾಯಕರಾದ ಇವರು ಆತ್ಮ ವಿಮರ್ಶೆ ಮತ್ತು ಆತ್ಮ ಪರೀಕ್ಷೆಯಲ್ಲಿ ತೊಡಗುತ್ತಾರೆ. ದುಗುಡು ದುಮ್ಮಾನದ ಮನಸ್ಥಿತಿಯಲ್ಲಿ ಬೆರೆತ ಇವರು ಭಗವಂತನಲ್ಲಿ ವ್ಯಗ್ರರಾಗಿ ಸಂಘರ್ಷಕ್ಕಿಳಿಯುವುದುಂಟು ಈ ರೀತಿ ದುಗುಡ ದುಮ್ಮಾನದಿಂದ ಮಾಡುವ ಇವರ ಪ್ರಾರ್ಥನೆಯನ್ನು ನಿಂದಾಸ್ತುತಿಯೆಂದು ಕರೆಯುವದುಂಟು, ಇಂತಹ ಸಂದಿಗ್ಧತೆಯ ಸ್ಥಿತಿಯನ್ನು ದಾಟಿ ಭಗವಧನುಭಾವದ ಅಂತಃಸ್ಪರ್ಶ ಅವರಿಗೆ ದೊರಕಿದಾಗ ದಿವ್ಯಾನಂದದಿಂದ ರೋಮಾಂಚಕರಾಗಿ ಮೈಮರೆತು ಹಾಡಿ ಕುಣಿಯುತ್ತಾರೆ ತುಂಬಾ ಭಾವುಕರಾಗಿ ಮನ ಬಿಚ್ಚಿ ಹಾಡುತ್ತಾರೆ. ಇಂತಹ ಆಂತರಿಕ ಮಹಾಂತರ ಅನುಭಾವ ಕೆಲಕಾಲ ಮಾತ್ರ ಇದ್ದು ಮಿಂಚಿ ಮರೆಯಾದರು ಅದರ ದಿವ್ಯ ಪ್ರಭಾವ ಅವರ ಬದುಕಿನಲ್ಲಿ ಬೆಳಕಾಗಿ ಅಘರ ಜೀವನ ಜ್ಯೋತಿರ್ಮಯವಾಗುತ್ತದೆ. ಇಂತಹ ವಿಶ್ವಪ್ರಜ್ಞೆಯ ವಿರಾಟ ದರ್ಶನವನ್ನು ಪಡೆದ ಮಹನೀಯರು ತಾವು ಕಂಡುಂಡ ದಿವ್ಯಾನುಭವವನ್ನು ಜನಸಾಮಾನ್ಯರೊಂದಿಗೆ

ಹಂಚಿಕೊಳ್ಳುವ ಕಿಂಕರ್ಯಕ್ಕೆ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ.

ದೇಶ-ದೇಶಾಂತರ ಸುತ್ತಿದ, ಜನಮನದ ಕಾಳಿಕೆ ಕಳೆದ, ಸಾಧಕರಿಗೆ ಸತ್ಯದ ಮಾರ್ಗವನ್ನು ತೋರಿದ, ತಪಸ್ವಿಗಳ ಮದ-ಕೆಡಿಸಿದ, ಜ್ಞಾನದ ಮಹಿಮೆಯು ಎಲ್ಲೆಲ್ಲೂ ಮೆರೆದ ಮಹಿಮೆಯನ್ನು ಶರಣರ ವಚನ ವಾಙ್ಮಯದಲ್ಲಿ ಕಾಣುತ್ತೇವೆ. ಹನ್ನೆರಡನೆಯ ಶತಮಾನವು ಭಕ್ತಿ ಬೆಳಸಿನ ಕಾಲ. ಕರ್ನಾಟಕದಲ್ಲಿ ಜರುಗಿದ ಶಿವ ಶರಣರ ಬಹುಮುಖ ಕ್ರಾಂತಿಯು ಜಾಗತಿಕ ಇತಿಹಾಸದಲ್ಲಿ ಒಂದು ಅಪೂರ್ವ ಘಟನೆ. ಅಂದಿನ ಕಲುಷಿತವಾಗಿದ್ದ ಧಾಮಿಕ ಹಾಗೂ ಸಾಮಾಜಿಕ ಪರಿಸರದ ಪರಿಣಾಮವೇ ಈ ಕ್ರಾಂತಿಗೆ ಮೂಲವಾಗಿತ್ತು. ಅಸಮಾನತೆಯನ್ನು ತೊಡೆದು ಹಾಕಿ ಸಮಾನತೆಯ ತತ್ವವನ್ನು ಆಚರಿಸಿ, ಮಾನವೀಯತೆಯ ತತ್ವವನ್ನಾಧರಿಸಿ ಮಾನವೀಯ ಮೌಲ್ಯಗಳಿಗೆ ಮಹತ್ವ ಕೊಟ್ಟು ಸದ್ಧರ್ಮದ ತಳಹದಿಯ ಮೇಲೆ ಆದರ್ಶ ಸಮಾಜದ ನಿರ್ಮಾಣದೊಂದಿಗೆ ಮನುಕುಲದ ಸಮುದ್ಧರಣವೇ ಶರಣರ ಕ್ರಾಂತಿಯ ಮುಲೋದ್ದೇಶವಾಗಿತ್ತು, ವಿಶ್ವವಿನೂತನವಾದ ಇಂತಹ ಮಹೋದ್ದೇಶವನ್ನು ಸಾಧಿಸಲೋಸುಗ ಜನಪರವಾದ ಸಮೃದ್ಧ ಸಾಹಿತ್ಯ ಮಾಧ್ಯಮದ ಅಗತ್ಯವಿತ್ತು. ಪಾಂಡಿತ್ಯ ಪ್ರತಿಪಾದನೆಗಿಂತಲೂ ಪರಮಸತ್ಯವನ್ನು ಪ್ರತಿಪಾದಿಸುವ ಸರಳವಾದ ಸುಲಲಿತವಾದ ಅಚ್ಚಗನ್ನಡದ ಆಡುಭಾಷೆಯ ಸೊಗಡಿನಲ್ಲಿ ವಚನ ಸಾಹಿತ್ಯವನ್ನು ಬಳಸಿದರು ಶರಣರ ವಚನಗಳು ಆತ್ಮ ಪರಮಾತ್ಮರ ಐಕ್ಯಾನುಭಾವವನ್ನು ತಮ್ಮ ಭಾಷೆಯಲ್ಲಿ ಮೂರ್ತಿಕರಿಸಿದ ಅನುಭಾವ ಸಾಹಿತ್ಯವಾಗಿದೆ. ಅಸಂಖ್ಯಾತ ಶರಣರು ಕನ್ನಡ ನಾಡಿನಲ್ಲಿ ಏಕಕಾಲದಲ್ಲಿ ಕಾಣಿಸಿಕೊಂಡು ಅಪಾರವಾದ ವಚನ ಸಾಹಿತ್ಯವನ್ನು ಕೃಷಿಮಾಡಿದರು. ಇಡೀ ವಿಶ್ವದ ಗಮನ ಸೆಳೆದ ಕಲ್ಯಾಣದ ಶರಣರ ವಚನ ಸಾಹಿತ್ಯ ಸೃಷ್ಟಿಗೊಂಡದ್ದು ಜಗತ್ತಿನ ಇತಿಹಾಸದಲ್ಲಿಯೇ ಮೊದಲನೆಯದು.

ವಚನ ಸಾಹಿತ್ಯದಲ್ಲಿ ಶರಣರ ಸಿದ್ಧಾಂತಕ್ಕೆ ಸಂಬಂಧಿಸಿದ ಸ್ಥಲ, ಲಿಂಗ, ಅಂಗ, ಶೂನ್ಯ, ಲಿಂಗಾಂಗ ಸಾಮರಸ್ಯ, ಷಟ್‌ಸ್ಥಲ, ಅಷ್ಟಾವರಣ, ಪಂಚಾಚಾರ, ಕಾಯಕ, ದಾಸೋಹ, ಪ್ರಸಾದ ಮುಂತಾದ ಪರಿಭಾಷಿಕ ಶಬ್ದಗಳನ್ನು ಬಳಸಿರುವುದಲ್ಲದೇ ಅವುಗಳನ್ನು ಅರ್ಥೈಸಿರುವುದು ಈ ಸಿದ್ಧಾಂತದ ಸ್ಪಷ್ಟತೆಗೆ ಶರಣರು ಕೊಟ್ಟ ಮಹತ್ವವನ್ನು ತೋರಿಸುತ್ತದೆ. ಧಾರ್ಮಿಕ, ಆಧ್ಯಾತ್ಮಿಕ ಜೀವನಕ್ಕೆ ಸಂಬಂಧಿಸಿದ ಹೊಸದೊಂದು ವೈಚಾರಿಕ ಕ್ರಾಂತಿಗೆ ನೂತನ ಸಮಾಜ ನಿರ್ಮಾಣಕ್ಕೆ ಬಸವಾದಿ ಶರಣರ ಚಿಂತನೆ ಮಾತು ಮತ್ತು ಆಚರಣೆ ಕಾರಣ, ಬಸವಣ್ಣನವರ ನೇತೃತ್ವದಲ್ಲಿ ನಡೆದ ಧಾರ್ಮಿಕ ಸಮಾಜಿಕ ಸಾಹಿತ್ಯಿಕ ಕ್ರಾಂತಿಯು ಮಹತ್ವಪೂರ್ಣವಿದ್ದು ಇದರಲ್ಲಿ ಅನೇಕ ಶರಣೆಯರು ಸಮರ್ಪಣಾ ಭಾವದಿಂದ ಬೆರೆತಿದ್ದಾರೆ. ಶರಣರು ಶಬ್ದಕ್ಕೆ ನಿಲುಕದ ತಮ್ಮ ಆಧ್ಯಾತ್ಮಿಕ ಅನುಭವವನ್ನು ಅಭಿವ್ಯಕ್ತಿಸಲು ವಿನೂತನ ಶೈಲಿಯ ವಚನಗಳನ್ನು ಬಳಸಿದ್ದಾರೆ. ತಮ್ಮ ಇಂದ್ರಿಯಾತೀತ ಅನುಭೂತಿಯನ್ನು ನಿರೂಪಿಸಲಾಗದ ಯುಕ್ತವಾದಂತಹ ಪ್ರತೀಕಗಳನ್ನು ಬಳಸಿ ಅರ್ಥಗರ್ಭಿತ ವಚನಗಳನ್ನು ರಚನೆ ಮಾಡಿರುವುದು ಕೇಲವ ಭೌದ್ಧಿಕ ಚಮತ್ಕಾರಗಳಾಗಿರದೇ ಆಧ್ಯಾತ್ಮಿಕ ಅನುಭಾವವನ್ನು ಗರ್ಭೀಕರಿಸಿಕೊಂಡಿರುವ ಕಲಾತ್ಮಕ ಕಾವ್ಯಮಯ ಸೃಷ್ಟಿಗಳ ವ್ಯಕ್ತಪಡಿಸುತ್ತವೆ.

ವಚನ ಕಿರಣ

– ಮಾತೆ ಜ್ಞಾನೇಶ್ವರಿ

ನಾ ಹಾಡುವೆ ಗುರು ಬಸವಣ್ಣನ
ನಾ ಪೂಜಿಸುವೆ ಗುರು ಬಸವಣ್ಣನ
ನಾ ಧ್ಯಾನಿಸುವೆ ಗುರು ಬಸವಣ್ಣನ
ಲೀಲಾ ವಿಶೇಷ ಲಿಂಗದೇವಾ ನೀ ಸಾಕ್ಷಿಯಾಗಿ

ಬಸವ ತತ್ವ ಬಿತ್ತಿ
ಬಸವಭಕ್ತಿಯ ನೆಲೆಗೊಳಿಸಿ
ಮನವೆಂಬ ಪಾತ್ರೆಯಲಿ
ಜ್ಞಾನವೆಂಬ ಸುಜಲವ ತುಂಬಿಹಳು
ಜ್ಞಾನೇಶ್ವರಿ ಪ್ರಿಯ ಬಸವಾತ್ಮಜೆ
ಲೀಲಾ ವಿಶೇಷ ಲಿಂಗದೇವಾ

ಸಂಗಮವೆಂಬ ಬಸವೈಕ್ಯ ಕ್ಷೇತ್ರದಲ್ಲಿ
ಬಂದು ನೆಲೆಸಿಹ ಮಾತಾಜಿ
ಶರಣ ಮೇಳವೆಂಬ ಪ್ರಣತೆಯ ಮಾಡಿ
ಪ್ರವಚನವೆಂಬ ತೈಲವನೆರೆದು
ಆಚಾರವೆಂಬ ಬತ್ತಿಯ ಮಾಡಿ
ಬಸವಾತ್ಮಜೆಯೆಂಬ ಜ್ಯೋತಿಯ ಮುಟ್ಟಿಸಲು
ಭಕ್ತಿಯೆಂಬ ಪ್ರಕಾಶ ತೊಳಗಿ ಬೆಳಗುತ್ತಿರಲು
ಲೀಲಾವಿಶೇಷ ಲಿಂಗದೇವ ನಲಿಯುತ್ತಿಹನು ನೋಡಾ.

ಅಯ್ಯಾ ನೆಲೆಗೊಂಡಿತು ಬಸವಾತ್ಮಜೆ ನಿಂದಲ್ಲಿ ಅನುಭಾವ
ಅನುಭಾವ ಅಳವಡಲು ಬಸವ ಮಂಟಪ
ಬಸವ ಮಂಟಪವಾದಲ್ಲಿ ರಾಷ್ಟ್ರೀಯ ಬಸವ ದಳ
ಬಸವ ದಳವಿದ್ದಲ್ಲಿ ತತ್ವ ಚಿಂತನೆ
ಅಂದಿನ ದಿನ ಅನುಭವ ಮಂಟಪಕೆ ಬಸವಣ್ಣ
ಇಂದಿನ ಬಸವ ಮಂಟಪಕೆ ಬಸವಾತ್ಮಜೆ
ನಾವು ಲಿಂಗಾಯತರೆಂದು ಹೇಳಿಕೊಟ್ಟರೂ
ಅಂಗದ ಮೇಲೆ ಲಿಂಗಧರಿಸರು, ಸ್ನಾನವಿಲ್ಲದೆ ತಿನ್ನುವರು
ಭಕ್ತಿಯಿಲ್ಲ – ಆಚಾರವಿಲ್ಲ ಕಂಡ ಕಂಡಲ್ಲಿ ಸುತ್ತಾಡಿ
ಲೀಲಾವಿಶೇಷ ಲಿಂಗದೇವನ ಅರಿಯದೆ
ಮರೆದವರಿಗೆ ಫಲವೆಲ್ಲಿಯದೋ?

ವಚನಗಳಲ್ಲಿ ಕಾಯಕದ ಮಹತ್ವ

– ಮಾತೆ ಕಸ್ತೂರಿದೇವಿ

1. ಸತ್ಸಂಕಲ್ಪದ ಕಾಯಕ

ನಾನು ಆರಂಭವ ಮಾಡುವೆನಯ್ಯಾ ಗುರು ಪೂಜೆಗೆಂದು
ನಾನು ಬೆವಹಾರವ ಮಾಡುವೆನಯ್ಯಾ ಲಿಂಗಾರ್ಚನೆಗೆಂದು
ನಾನು ಪರಸೇವೆಯ ಮಾಡುವೆನಯ್ಯಾ ಜಂಗಮ ದಾಸೋಹಕ್ಕೆಂದು
ನಾನಾವಾವ ಕರ್ಮಂಗಳ ಮಾಡಿದಡೆಯೂ ಆ
ಕರ್ಮ ಫಲಭೋಗವ ನೀ ಕೊಡುವೆ ಎಂಬುದ ನಾ ಬಲ್ಲೆನು
ನೀ ಕೊಟ್ಟ ದ್ರವ್ಯವ ನಿಮಗಲ್ಲದೆ ಮತ್ತೊಂದು ಕ್ರೀ ಮಾಡೆನು.
ನಿಮ್ಮ ಸೊಮ್ಮಿಂಗೆ ಸಲಿಸುವೆನು ನಿಮ್ಮಾಣೆ ಲಿಂಗದೇವಾ

ಬಸವ ಮಾರ್ಗದಲ್ಲಿ ಸಾಗಬೇಕೆನ್ನುವ ಭಕ್ತನು ತನ್ನ ಅಭಿರುಚಿಗೆ ತಕ್ಕಂತೆ ಕೈ ಗೊಳ್ಳುವ ಪ್ರತಿಯೊಂದು ಕಾಯಕದಲ್ಲಿಯೂ ಬಹಿರಂಗದ ಶ್ರೇಯಸ್ಸಿನೊಂದಿಗೆ ಅಂತರಂಗದಲ್ಲಿ ಒಂದು ಸತ್ಸಂಕಲ್ಪವಿರಬೇಕು ಎನ್ನುತ್ತಾರೆ ಧರ್ಮಪಿತರು. ಭಕ್ತನು ಮಾಡುವ ಯಾವುದೇ ಕೆಲಸಗಳು ಕರ್ಮ ಅಂದರೆ ಸರ್ವರಿಗೂ ಅಹಿತವನ್ನುಂಟು ಮಾಡುವಂಥದ್ದು. ಕ್ರಿಯೆ ಅಂದರೆ ತನಗೆ ಮಾತ್ರ ಹಿತವನ್ನು ಮಾಡುವಂಥದ್ದು ಆಗಬಹುದು. ಇಲ್ಲಿ ಕರ್ಮ ಮತ್ತು ಕ್ರಿಯೆಯಲ್ಲಿ ಆತ್ಮ ಕಲ್ಯಾಣವಾಗಲಿ, ಲೋಕ ಕಲ್ಯಾಣವಾಗಲಿ ವ್ಯಕ್ತವಾಗುವುದಿಲ್ಲ. ಆದ್ದರಿಂದ ಕರ್ಮ, ಕ್ರಿಯೆಗಳು ಕಾಯಕವಾಗಿ ಪರಿವರ್ತನೆಯಾಗಲು ಗುರು ಲಿಂಗ ಜಂಗಮ ಸೇವೆಗೆ ಅದನ್ನು ಮೀಸಲಿಡಬೇಕು. ಅಂತೆಯೇ ಮೇಲಿನ ವಚನದಲ್ಲಿ ತನು ಸವೆಸಿ ಮಾಡುವ ಆರಂಭ, ಒಕ್ಕಲು ತನವನ್ನು ಗುರುಪೂಜೆಯೆಂದು ತಿಳಿದು ಮಾಡಿದಾಗ ಅದು ಪವಿತ್ರ ಕಾಯಕವಾಗುತ್ತದೆ. ಇಲ್ಲದಿದ್ದರೆ ಯಾಂತ್ರಿಕ ದುಡಿಮೆಯಾಗುತ್ತದೆ. ಅದೇ ರೀತಿ ಮತಿ -ಮನಗಳನ್ನು ದುಡಿಸಿ ಮಾಡುವ ವ್ಯವಹಾರವನ್ನು ಲಿಂಗಪೂಜೆಯೆಂದು ಭಾವಿಸಿ ಮಾಡಿದಾಗ ಮಾತ್ರ, ಅದು ಪವಿತ್ರವಾದ ಕಾಯಕವಾಗುವುದು. ಧನ ಸಂಪಾದನೆಗೆಂದು ಮಾಡುವ ಪರ ಸೇವೆಯನ್ನು ಜಂಗಮ ದಾಸೋಹ ಎಂದು ತಿಳಿದು ಮಾಡಿದರೆ ಅದು ಸಾರ್ಥಕತೆ ಹೊಂದುತ್ತದೆ. ಇದರಿಂದ ಬರುವ ಸಂಪಾದನೆಯಲ್ಲಿ ಪರಮಾತ್ಮನು ಕೊಟ್ಟದ್ದು ಎಂಬ ಸದ್ಭಾವ, ಸದ್ಭಕ್ತಿಯಿಂದ ಗಳಿಕೆಯ ಒಂದಂಶವನ್ನು ಗುರು ಲಿಂಗ ಜಂಗಮಕ್ಕೆ ತೆಗೆದಿರಿಸಿ ಕೊಡಬೇಕು. ಈ ರೀತಿ ಗಳಿಸಿದ ಗಳಿಕೆಯನ್ನು ಬೇರೆ ಯಾವ ಕ್ರಿಯೆಗಳಿಗೂ ಬಳಸಬಾರದು ಎಂಬುದು ಧರ್ಮಪಿತರು ಇಲ್ಲಿ ಕಟ್ಟಪ್ಪಣೆ ಮಾಡುತ್ತಿದ್ದಾರೆ. ಕಾಯಕದಿಂದ ಗಳಿಸಿದ ಸಂಪಾದನೆಯನ್ನು ಸತ್ಪಾತ್ರಕ್ಕೆ ಸಲ್ಲಿಸುವುದಾಗಿ ದೇವ ಸಾಕ್ಷಿಯಾಗಿ ಪ್ರತಿಜ್ಞೆಗೈಯಲು ಆದೇಶಿಸುತ್ತಿದ್ದಾರೆ.

ಹೀಗೆ ವಚನದಲ್ಲಿ ಧರ್ಮಪಿತ ಬಸವಣ್ಣನವರು ಕಾಯಕ ನಿರತನಾದ ಭಕ್ತನಿಗೆ ಇಮ್ಮಡಿಯಾದ ಆತ್ಮವಿಶ್ವಾಸವನ್ನು ತುಂಬುವ ಮೂಲಕ ದೇವರು ಮತ್ತು ಭಕ್ತ ಇಬ್ಬರಲ್ಲಿಯೂ ಪರಸ್ಪರ ನಂಬಿಕೆಯನ್ನು ಬಿತ್ತಿ ಬೆಳೆಸುತ್ತಿದ್ದಾರೆ!! ಮಾತ್ರವಲ್ಲ ಗುರು ಲಿಂಗ ಜಂಗಮ ಸೇವೆಗೆ ಪ್ರಾಮಾಣಿಕ ಮತ್ತು ಪರಿಶ್ರಮದಿಂದ ಹರಿದ ಬೆವರ ಹನಿಗಳೇ ಆಗಬೇಕು ಎಂದು ಸೂಚಿಸುತ್ತಿದ್ದಾರೆ.

2. ಕಾಯಕವೇ ಮುಕ್ತಿ

ಕೃತ್ಯ ಕಾಯಕವಿಲ್ಲದವರು ಭಕ್ತರಲ್ಲ
ಸತ್ಯ ಶುದ್ಧವಿಲ್ಲದುದು ಕಾಯಕವಲ್ಲ

ಆಸೆ ಎಂಬುದು ಭವದ ಬೀಜ; ನಿರಾಶೆಯೆಂಬುದು ನಿತ್ಯ ಮುಕ್ತಿ
ಉರಿಲಿಂಗಪೆದ್ದಿಗಳರಸನಲ್ಲಿ ಸದರವಲ್ಲ ಕಾಣವ್ವಾ

ವಚನಕಾರರಾಗಿದ್ದ ಉರಿಲಿಂಗಪೆದ್ದಿಗಳ ಪುಣ್ಯ ಸ್ತ್ರೀ ಕಾಳವ್ವೆ ಎಂಬ ಹೆಸರಿನ ಶರಣೆ ಕಾಯಕದ ಬಗ್ಗೆ ತನ್ನ ಸದೃಢವಾದ ವಿಚಾರ ಮತ್ತು ಆಚಾರಗಳನ್ನು ಈ ವಚನದಲ್ಲಿ ಎತ್ತಿ ಹಿಡಿದಿದ್ದಾರೆ.

ಮರ್ತ್ಯಲೋಕದಲ್ಲಿ ಜೀವಾತ್ಮನು ಸಾರ್ಥಕವಾಗಿ ಇಹಪರಕ್ಕೆ ಹೊರೆಯಾಗದಂತೆ ಬದುಕಲು ಬೇಕಾದ ಯಾವುದಾದರೊಂದು ಉದ್ಯೋಗ, ದುಡಿಮೆಯನ್ನು ಅವಲಂಬಿಸದೆ ಕೇವಲ ಕುಳಿತು ಉಣ್ಣುವವರು ಭಕ್ತರೆನಿಸಿಕೊಳ್ಳಲು ಯೋಗ್ಯರಲ್ಲ. ತನು -ಮನ-ಮತಿಗಳನ್ನು ಬಳಲಿಸಿ ದುಡಿಯಲು ಸಿದ್ಧವಿಲ್ಲದವರು ಶರಣರೆನಿಸಿಕೊಳ್ಳಲು ಅರ್ಹರಲ್ಲ. ಇಲ್ಲಿ ಏಕಾಯಕಏ ಎಂಬುದು ಮಾಡಲೇಬೇಕಾದ ಭಕ್ತನ ಒಂದು ಲಕ್ಷಣ. ಹಾಗೆಂದು ಭಕ್ತ ತನ್ನ ಹೊರೆತನವನ್ನು ನೀಗಿಕೊಳ್ಳಲು ಯಾವುದಾದರೂ ಕಾಯಕ ಮಾಡಿದ ಮಾತ್ರಕ್ಕೆ ಶರಣೆ ಕಾಳವ್ವೆಯವರು ಹೆಚ್ಚಿನ ಅಂಕಗಳನ್ನು ಕೊಡಲು ಸಿದ್ಧರಿಲ್ಲ. ಏಕೆಂದರೆ ಆ ಕಾಯಕ ಸತ್ಯ ಶುದ್ಧವಾಗಿರಬೇಕು ಎಂದು ಆಗ್ರಹಿಸುತ್ತಿದ್ದಾರೆ. ಅಂದರೆ ಕಾಯಕದಲ್ಲಿ ನೀತಿವಂತಿಕೆ, ಶೀಲವಂತಿಕೆ ತುಂಬಿರಬೇಕು. ಮೋಸ, ವಂಚನೆ, ಆರಂಭಶೂರತ್ವ ಮುಂತಾದ ದೌರ್ಬಲ್ಯಗಳಿಂದ ಕೂಡಿರಬಾರದು. ತಾನು ಮಾಡುತ್ತಿರುವ ಕಾಯಕದೊಂದಿಗೆ ಇಂಥ ನೈತಿಕತೆಯನ್ನು ಅಳವಡಿಸಿಕೊಳ್ಳಲು ಅಸಮರ್ಥನಾದರೆ, ಆ ವ್ಯಕ್ತಿ ಕೈಗೊಂಡಿರುವ ಕೆಲಸ ಕಾಯಕ ಎಂದು ಕರೆಸಿಕೊಳ್ಳಲು ಅರ್ಹತೆ ಪಡೆಯುವುದಿಲ್ಲ! ಬದಲಿಗೆ ಅದು ಕೇವಲ ತನಗೆ ಮಾತ್ರ ಹಿತವನ್ನುಂಟು ಮಾಡುವ ಕ್ರಿಯೆಯಾಗಿಯೋ ಅಥವ ಸರ್ವರಿಗೂ ಕೇಡನ್ನುಂಟು ಮಾಡುವ ಕರ್ಮವಾಗಿಯೋ ಪರಿವರ್ತನೆ ಹೊಂದುತ್ತದೆ ! ಪರಿಣಾಮ ಬೀರುತ್ತದೆ !!

ಇನ್ನು ಕಾಯಕದಲ್ಲಿ ನಿರತನಾದಾಗ ಒಂದೇ ದಿನದಲ್ಲಿ ಶ್ರೀಮಂತನಾಗಬೇಕೆಂಬ ಅತಿಯಾದ, ಅವಸರದಿಂದ ಕೂಡಿದ ಲಾಭದ ಆಸೆ ಇಟ್ಟುಕೊಂಡು ಮಾಡಿದರೆ ಆಸೆಗೆ ಕೊನೆಯೆಂಬುದಿಲ್ಲದೆ ಮತ್ತೆ ಮತ್ತೆ ಭವದ ಕೂಪಕ್ಕೆ ತಳ್ಳುತ್ತದೆ. ಅನ್ಯಾಯ, ಅಸತ್ಯಗಳನ್ನು ಪ್ರಚೋದಿಸುತ್ತದೆ. ಆದ್ದರಿಂದ ಕಾಯಕಕ್ಕೆ ತಕ್ಕ ಪ್ರತಿಫಲವನ್ನು ಪ್ರಾಮಾಣಿಕವಾಗಿ ಬಯಸಿದರೆ ಮಾತ್ರ ದೇವರು ಮೆಚ್ಚುತ್ತಾನೆ. ಇಹಪರದಲ್ಲೂ ಶ್ರೇಯಸ್ಸು ಸಿದ್ಧಿಸುತ್ತದೆ. ಅದೇ ನಿತ್ಯ ಮುಕ್ತಿ. ಈ ಎಲ್ಲಾ ಮೌಲ್ಯಗಳು ಒಂದಕ್ಕೊಂದು ಪೋಷಕವಾಗಿ ಸೇರಿದಾಗ ಮಾತ್ರ ವ್ಯಕ್ತಿಯು ಬೆಳೆಯುತ್ತಾನೆ, ಸಮಾಜವೂ ಸುಸ್ಥಿತಿಯಲ್ಲಿರುತ್ತದೆ; ರಾಷ್ಟ್ರವೂ ಮುನ್ನಡೆ ಸಾಧಿಸುತ್ತದೆ ಎಂಬುದರಲ್ಲಿ ಸಂದೇಹವಿಲ್ಲ ಎಂಬುದನ್ನು ಮನಗಾಣಬೇಕು.

3.ಕಾಯಕವೇ ಕೈಲಾಸ

ಮಾಡಿ ನೀಡಿ ಹೋದಹೆನೆಂಬಾಗ ಕೈಲಾಸವೇನು ಕೈಕೂಲಿಯೆ ?
ಹಿಂದೆಂದೂ ಭಾವಿಸದೆ ಮುಂದೊಂದೂ ಕಲ್ಪಿಸದೆ ಸಲೆ ಸಂದಿದ್ದಾಗವೆ ?
ಮಾರಯ್ಯ ಪ್ರಿಯ ಅಮರೇಶ್ವರ ಲಿಂಗವಿದ್ದ ಠಾವೇ ಕೈಲಾಸ .

ಬಸವಾದಿ ಪ್ರಮಥರು ಭಕ್ತನಾದವನು, ತಾನು ಮಾಡುತ್ತಿರುವ ಕಾಯಕದಲ್ಲೇ ಕೈಲಾಸದ ಆನಂದವನ್ನು ಅನುಭವಿಸಬೇಕೆಂದರು. ಅದರಂತೆ ವಚನ ಸಾಹಿತ್ಯ ಜನ್ಮ ತಳೆಯುವುದಕ್ಕೆ ಮೊದಲು ಮರ್ತ್ಯಲೋಕದಲ್ಲಿ ದಾನ, ಧರ್ಮ, ಪುಣ್ಯಕಾರ್ಯ, ತೀರ್ಥಯಾತ್ರೆ ಮಾಡಿದಾಗ ಮಾತ್ರ, ಸತ್ತ ನಂತರ ಕೈಲಾಸವೆಂಬ ಪುಣ್ಯಪದವಿ ಪ್ರಾಪ್ತಿಯಾಗುತ್ತದೆ ಎಂಬ ಕಲ್ಪನೆ, ನಿರೀಕ್ಷೆ , ನಂಬಿಕೆ ರೂಢಿಯಲ್ಲಿತ್ತು. ಆದರೆ ಅನುಭವಕ್ಕೆ ಸಿಗದ, ದಾಖಲೆಗೆ ನಿಲುಕದ ಅಗೋಚರವಾದ ಕೈಲಾಸ, ಸತ್ತ ನಂತರ ಸಿಗುತ್ತದೆ ಎಂದು ನಂಬಿಸಿ, ಆಮಿಷವನ್ನು ತೋರಿಸಿ ಜನರನ್ನು ದಾನ, ಧರ್ಮಕ್ಕೆ ಪ್ರಚೋದಿಸುವ

ವಾಮ ಮಾರ್ಗವನ್ನು ಶರಣರು ತುಳಿಯಲಿಲ್ಲ. ಇಂಥ ಕಲ್ಪನೆಯನ್ನು ಹುಸಿಗೊಳಿಸಲು, ದುರ್ಬಲಗೊಳಿಸಲು ಸತ್ಯವನ್ನು ಪ್ರಕಾಶಿಸುವ ಮಹದುದ್ದೇಶದಿಂದ ಅನುಭವ ಮಂಟಪದ ಪ್ರಸಿದ್ಧ ಶರಣೆ ಆಯ್ದಕ್ಕಿ ಲಕ್ಕಮ್ಮನವರು ತಮ್ಮ ವಚನದಲ್ಲಿ ನಮ್ಮನ್ನು ಚಿಂತನೆಯೊಂದಿಗೆ ಅನುಷ್ಠಾನಕ್ಕೆ ಪ್ರೇರೇಪಿಸುತ್ತಿದ್ದಾರೆ.

ಈ ಲೋಕದಲ್ಲಿ ಕಷ್ಟಪಟ್ಟು ದುಡಿದು, ಸಂಪಾದಿಸಿ ದಾನ ಮಾಡಿ ಪುಣ್ಯ ಸಂಚಯವಾದರೆ ಸತ್ತ ನಂತರ ಕೈಲಾಸ ಸಿಗುವುದೇ ?! ಹಾಗಿದ್ದರೆ ಕೈಲಾಸವೇನು ಸ್ಥಾನ ವಿಶೇಷವೇ ? ವ್ಯಾಪಾರವೇ ? ಒಪ್ಪಂದವೇ ? ಪೂರ್ವನಿಯೋಜಿತವೆ ? ಅಥವ ಕೈ ಕೂಲಿಯೆ?! ಎಂದು ಕೇಳುವ ಮೂಲಕ ಕೈಲಾಸದ ಭ್ರಮೆಯನ್ನು ಹುಸಿಗೊಳಿಸುತ್ತಿದ್ದಾರೆ ! ಮುಂದೆ ಏನೋ ಸಿಗಬಹುದು ಎಂಬ ಹುಸಿ ಭರವಸೆ ಇಟ್ಟುಕೊಳ್ಳದೆ ಹಿಂದೆ ಏನೋ, ಸಿಗುತ್ತದೆ, ಇತ್ತು ಅದು ನಮ್ಮ ಪೂರ್ವಜರಿಗೆ ಸಿಕ್ಕಿದೆ. ಅದರಂತೆ ಮುಂದೆ ನಮಗೂ ಸಿಗುತ್ತದೆ, ಸಿಗಲಿದೆ ಎಂದು ಹುಸಿ ನಿರೀಕ್ಷೆಗಳನ್ನು ಇಟ್ಟುಕೊಂಡು ಬದುಕಬಾರದು. ಬದುಕಿರುವಾಗಲೇ ನಮ್ಮ ಜೀವಿತ ಕಾಲದಲ್ಲಿಯೇ ಶರಣರು ಹಾಕಿಕೊಟ್ಟಿರುವ ಸತ್ಪಥದಲ್ಲಿ ಸಾಗುತ್ತಾ ಉತ್ತಮ ಬಾಳನ್ನು ಬಾಳಿದಾಗ ಮಾತ್ರ ಪ್ರತಿಯೊಬ್ಬರ ಜೀವನವು ಕೈಲಾಸವಾಗುತ್ತದೆ ; ಆಗಲು ಸಾಧ್ಯ ಎಂದು ತಮ್ಮ ಸ್ವಾನುಭವವನ್ನು ಇಲ್ಲಿ ಬಿತ್ತರಿಸಿದ್ದಾರೆ.

ಕಾಯಕದಲ್ಲಿ ನಿರತನಾದರೆ ಗುರುದರ್ಶನವಾದರೂ
ಮರೆಯಬೇಕು, ಲಿಂಗಪೂಜೆಯಾದರೂ
ಮರೆಯಬೇಕು, ಜಂಗಮ ಮುಂದಿದ್ದಡೂ
ಹಂಗು ಹರಿಯಬೇಕು. ಕಾಯಕವೇ ಕೈಲಾಸವಾದ
ಕಾರಣ. ಅಮರೇಶ್ವರ ಲಿಂಗವಾಯಿತ್ತಾದಡೂ
ಕಾಯಕದೊಳಗು

ಭಕ್ತನು ತಾನು ಕೈಗೊಂಡಿರುವ ಕಾಯಕದಲ್ಲಿ ಸಂಪೂರ್ಣವಾಗಿ ತನ್ಮಯತೆಯನ್ನು ಅನುಭವಿಸಬೇಕು ಎನ್ನುತ್ತದೆ ಮೇಲಿನ ವಚನ. ಎರಡು ಮನಸ್ಸಿನಿಂದ ಕಾಯಕ ಮಾಡುವುದು ನಿಷಿದ್ಧ. ಕಾಯಕದಲ್ಲಿ ನಿರತವಾಗಿರುವ ಪವಿತ್ರ ಸಮಯದಲ್ಲಿ ತನ್ನ ಪ್ರೀತಿ ಪಾತ್ರ, ಗುರು ಲಿಂಗ ಜಂಗಮವನ್ನು ಮಾತ್ರವಲ್ಲ ತನ್ನ ಇತರ ವೈಯಕ್ತಿಕ ಸಂಬಂಧಗಳನ್ನು ಸಹ ಮರೆಯಬೇಕು ಎನ್ನುತ್ತಾರೆ ಆಯ್ದಕ್ಕಿ ಮಾರಯ್ಯನವರು. ಅವರಿಗಾಗಿ ಮಾಡಲೇಬೇಕಾದ ಕರ್ತವ್ಯಗಳಿದ್ದರೆ ಕಾಯಕದ ನಂತರ ಸಮಯವನ್ನು ಕೊಡಬೇಕು. ಅದಾಗದಿದ್ದರೆ ರಜೆ ತೆಗೆದುಕೊಂಡು ವೈಯಕ್ತಿಕ ಕೆಲಸ ಮಾಡಬೇಕು. ಎಂದಿಗೂ ಕಾಯಕ ಮತ್ತು ವೈಯಕ್ತಿಕ ಉದ್ದೇಶಗಳನ್ನು ಬೆಸೆಯಬಾರದು ಎಂಬ ನಿಯಮಗಳನ್ನು ಹನ್ನೆರಡನೆಯ ಶತಮಾನದಲ್ಲಿಯೇ ಶರಣರು ವಿಧಿಸಿದ್ದನ್ನು ನೋಡಿದರೆ ಆಶ್ಚರ್ಯವಾಗುತ್ತದೆ.

ಎರಡು ಮನಸ್ಸಿನಿಂದ ಕೆಲಸ ಮಾಡುವಾಗ ದೋಷ ಪ್ರಾಪ್ತಿಯಾಗುವ, ನಿಗಧಿತ ವೇಳೆಯಲ್ಲಿ ಕೆಲಸ ಮುಗಿಯದೆ ನಿದಾನ ದ್ರೋಹವೆಸಗುವ ಮೂಲಕ ಸಾಮಾಜಿಕ ಪಾಪಕ್ಕೆ ಗುರಿಯಾಗಬೇಕಾಗುತ್ತದೆ ಎಂದು ಶರಣರು ಇಲ್ಲಿ ಎಚ್ಚರಿಸಿದ್ದಾರೆ. ಗುರು ಲಿಂಗ ಜಂಗಮ ಸೇವೆಯಿಂದ ಸಿಗುವ ಅನುಭೂತಿಯನ್ನು ಕಾಯಕದಲ್ಲೂ ಕಾಣಬೇಕು ಎಂಬುದೇ ಶರಣರ ಸಿದ್ಧಾಂತ. ಮಾತ್ರವಲ್ಲ ದೇವರಿಗೂ ಸಹ ಕಾಯಕದಿಂದ ವಿನಾಯಿತಿ ಕೊಟ್ಟಂತೆ ಕಾಣುವುದಿಲ್ಲ. ಏಕೆಂದರೆ ಸರ್ವಶಕ್ತನೂ, ನಿರಾಕಾರನೂ ಆದ ಪರಮಾತ್ಮನು ಸಹ ಸೃಷ್ಟಿ, ಸ್ಥಿತಿ, ಲಯ, ತಿರೋಧಾನ ಮತ್ತು ಅನುಗ್ರಹ ಎಂಬ ಪಂಚ ಕರ್ತವ್ಯಗಳಲ್ಲಿ ಮಗ್ನನಾಗಿರುತ್ತಾನೆ ಎಂದು ಮನಗಾಣಿಸುತ್ತಾರೆ.

★★★







ಪೂಜ್ಯ ಮಾತಾಜಿಯವರ ವರ್ಧಂತಿಯ ಸಿಹಿ ಕ್ಷಣಗಳು



ಪೂಜ್ಯ ಮಾತಾಜಿಯವರ ವರ್ಧಂತಿಯ ಸಿಹಿ ಕ್ಷಣಗಳು



April Sanchike Published on 18-04-2017
Name of the Printer - Sumuka Printers, Bengalure-560010
Registered with Registrar of News Papers in India, New Delhi No.19988/70
Postal Registration (SSP os BG-West Dn)No.KA/BGW-50/wpp-17/2015-17,
Licenced to Post the Printed Magazine without Prepayment (WPP-17).
Posted at Bengalure PSO, Mysuru Road, (Bg-560026) on 3rd, 10th,
20th of every month, Pages 32+4